सत्यमेव जयते

# ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳ ಚುನಾವಣೆಗಾಗಿ

# ಮತ ಎಣಿಕೆ ಏಜೆಂಟರ ಕೈಪಿಡಿ

## (ವಿದ್ಯುನ್ಮಾನ ಮತಯಂತ್ರಗಳನ್ನು ಉಪಯೋಗಿಸುವ ಚುನಾವಣೆಗಳು)

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**2018**

# ನಗರ ಸಭೆ/ಪುರಸಭೆ/ಪಟ್ಟಣ ಪಂಚಾಯತಿಗಳ ಚುನಾವಣೆಗಾಗಿ

# ಮತ ಎಣಿಕೆ ಏಜೆಂಟರ ಕೈಪಿಡಿ

# (ವಿದ್ಯುನ್ಮಾನ ಮತಯಂತ್ರಗಳನ್ನು ಉಪಯೋಗಿಸುವ ಚುನಾವಣೆಗಳು)

**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ**

**2018**

# ಮತ ಎಣಿಕೆ ಏಜೆಂಟರ ಕೈಪಿಡಿ
## ವಿಷಯಸೂಚಿ


| | | ಪುಟ ಸಂಖ್ಯೆ |
|---|---|---|
| 1. | ಪೀಠಿಕೆ | 1 |
| 2. | ಮತ ಎಣಿಕೆ ಏಜೆಂಟರ ಪಾತ್ರ | 1 |
| 3. | ಚುನಾವಣೆಗಳಲ್ಲಿ ವಿದ್ಯುನ್ಮಾನ ಮತ ಯಂತ್ರ ವ್ಯವಸ್ಥೆಯನ್ನು ಜಾರಿಯಲ್ಲಿ ತರುವುದು | 1 |
| 4. | ವಿದ್ಯುನ್ಮಾನ ಮತಯಂತ್ರಗಳು ಹಾಗೂ NOTA | 2–4 |
| 5. | ಮತ ಎಣಿಕೆ ಏಜೆಂಟರಿಗೆ ಇರಬೇಕಾದ ಅರ್ಹತೆಗಳು | 5 |
| 6. | ನೇಮಕವಾಗಬಹುದಾದ ಮತ ಎಣಿಕೆ ಏಜೆಂಟರ ಸಂಖ್ಯೆ | 5 |
| 7. | ಮತ ಎಣಿಕೆ ಏಜೆಂಟರ ನೇಮಕಾತಿ ( ಪ್ರಪತ್ರ–11) | 6 |
| 8. | ಮತ ಎಣಿಕೆ ಏಜೆಂಟರನ್ನು ನೇಮಕ ಮಾಡಲು ಕಾಲಮಿತಿ | 6 |
| 9. | ಮತ ಎಣಿಕೆ ಏಜೆಂಟನ ನೇಮಕಾತಿಯನ್ನು ರದ್ದುಪಡಿಸುವುದು (ಪ್ರಪತ್ರ–13) | 7 |
| 10. | ಮತ ಎಣಿಕೆ ಕೊಠಡಿಗೆ ಎಣಿಕೆ ಏಜೆಂಟನ ಪ್ರವೇಶ | 7 |
| 11. | ಮತ ಎಣಿಕೆ ಏಜೆಂಟರಿಗೆ ಬ್ಯಾಡ್ಜುಗಳನ್ನು ನೀಡುವುದು | 7 |
| 12. | ಮತ ಎಣಿಕೆ ನಡೆಯುವ ಕೊಠಡಿಯಲ್ಲಿ ಶಿಸ್ತು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವುದು | 8 |
| 13. | ಮತ ಎಣಿಕೆ ಕೇಂದ್ರದಲ್ಲಿ ಧೂಮಪಾನ ನಿಷೇಧಿಸಿರುವುದು | 8 |
| 14. | ಮತ ಎಣಿಕೆ ಏಜೆಂಟರಿಗೆ ಆಸನ ವ್ಯವಸ್ಥೆ | 8 |
| 15. | ಮತ ಎಣಿಕೆಯ ಟೇಬಲ್ಲುಗಳಿಗೆ ಅಡ್ಡಪಟ್ಟಿ ವ್ಯವಸ್ಥೆ | 9 |
| 16. | ರಹಸ್ಯ ಪಾಲನೆ | 9 |
| 17. | ಎಣಿಕೆ ಸಿಬ್ಬಂದಿಗಳ ರ್‍ಯಾಂಡಮ್ ಆಯ್ಕೆ | 9–10 |
| 18. | ನಿರಂತರ ಮತ ಎಣಿಕೆ | 11 |
| 19. | ಅಂಚೆ ಮತಪತ್ರಗಳನ್ನು ಮೊದಲು ಎಣಿಕೆ ಮಾಡಬೇಕು | 11–14 |
| 20. | ಮತಗಟ್ಟೆಯಲ್ಲಿ ಚಲಾಯಿಸಿದ ಮತಗಳ ಎಣಿಕೆ | 14 |
| 21. | ಕಂಟ್ರೋಲ್ ಯೂನಿಟ್‌ನ ಮೇಲೆ ತಪಾಸಣೆ ಮುದ್ರೆಗಳು | 15 |
| 22. | ಕಂಟ್ರೋಲ್ ಯೂನಿಟ್ ಸಾಗಿಸುವ ಪೆಟ್ಟಿಗೆಯನ್ನು ತೆಗೆಯುವುದು | 15 |
| 23. | ಕಂಟ್ರೋಲ್ ಯೂನಿಟ್‌ನ ಮೇಲಿರುವ ಮೊಹರುಗಳನ್ನು ಹಾಗೂ ಗುರುತಿನ ಚಿನ್ಹೆಗಳನ್ನು ಪರಿಶೀಲಿಸುವುದು | 15 |

| | | ಪುಟ ಸಂಖ್ಯೆ |
|---|---|---|
| 24. | ಪೇಪರ್ ಸೀಲಿನ ಕ್ರಮ ಸಂಖ್ಯೆಯನ್ನು ತಾಳೆ ನೋಡುವುದು | 15 |
| 25. | ಕಂಟ್ರೋಲ್ ಯೂನಿಟ್‌ಗಳನ್ನು ವ್ಯತ್ಯಸ್ತಗೊಳಿಸಿರುವುದು ಕಂಡುಬಂದರೆ ಅವುಗಳನ್ನು ದೂರವಿಡಬೇಕು | 16 |
| 26. | ವೀಕ್ಷಕರ ಪಾತ್ರ | 16 |
| 27. | ಫಲಿತಾಂಶವನ್ನು ಖಚಿತಪಡಿಸುವುದು | 17 |
| 28. | ಪ್ರಪತ್ರ 17A EVM ರ, ಮತ ಎಣಿಕೆಯ ಫಲಿತಾಂಶ ಭಾಗ–IIನ್ನು ಪೂರ್ಣಗೊಳಿಸುವುದು | 18 |
| 29. | ಅಂತಿಮ ಫಲಿತಾಂಶ ಪಟ್ಟಿಯನ್ನು ಸಿದ್ಧಪಡಿಸುವುದು | 19 |
| 30. | ಮತಗಳ ಮರು ಎಣಿಕೆ | 19 |
| 31. | ಮರು ಮತದಾನ ನಡೆಸುವ ಸಂದರ್ಭದಲ್ಲಿ ಎಣಿಕೆ ಕಾರ್ಯದ ಮುಂದೂಡಿಕೆ | 20 |
| 32. | ಮತ ಎಣಿಕೆ ನಂತರ ವಿದ್ಯುನ್ಮಾನ ಮತಯಂತ್ರಗಳಿಗೆ ಮರು ಮೊಹರು ಹಾಕುವುದು | 21–22 |
| 33. | ಅನುಬಂಧ–I – ಮತ ಎಣಿಕೆ ಏಜೆಂಟನ ನೇಮಕಾತಿ | 23 |
| 34. | ಮತ ಎಣಿಕೆ ಏಜೆಂಟರ ಘೋಷಣೆ (ರಿಟರ್ನಿಂಗ್ ಆಫೀಸರ್ ಸಮಕ್ಷಮದಲ್ಲಿ ಸಹಿ ಮಾಡಬೇಕು) | 24 |
| 35. | ಅನುಬಂಧ–II – ಮತ ಎಣಿಕೆ ಏಜೆಂಟನ ನೇಮಕಾತಿಯ ರದ್ದತಿ | 25 |
| 36. | ಅನುಬಂಧ–III – ಭಾಗ–I –ದಾಖಲಾದ ಮತಗಳ ಲೆಕ್ಕ | 26 |
| 37 | ಅನುಬಂಧ–III – ಭಾಗ–II –ಮತ ಎಣಿಕೆಯ ಫಲಿತಾಂಶ | 28 |
| 38 | ಅನುಬಂಧ–IV ಅಂತಿಮ ಫಲಿತಾಂಶದ ಹಾಳೆ | 29 |

# ಮತ ಎಣಿಕೆ ಏಜೆಂಟರ ಕೈಪಿಡಿ

## (ವಿದ್ಯುನ್ಮಾನ ಮತ ಯಂತ್ರಗಳನ್ನು ಉಪಯೋಗಿಸುವ ಚುನಾವಣೆಗಳಿಗಾಗಿ)

**1. ಪೀಠಿಕೆ.**

ಚುನಾವಣಾ ಪ್ರಕ್ರಿಯೆ ಅಂತಿಮಗೊಳ್ಳುವುದರ ಕೊನೆಯ ಪ್ರಮುಖ ಹಂತವೆಂದರೆ ಮತಗಳ ಎಣಿಕೆ. ತಪ್ಪಿಲ್ಲದ ಮತ್ತು ಸರಿಯಾದ ಮತಗಳ ಎಣಿಕೆಯಿಂದ ಮತದಾರರ ನಿಜವಾದ ಆಯ್ಕೆ ವ್ಯಕ್ತವಾಗುತ್ತದೆ ಮತ್ತು ಅವರ ನೈಜವಾದ ಆಯ್ಕೆಯನ್ನು ಹಾಗೆ ನಿರ್ಧರಿಸುವುದರ ಆಧಾರದ ಮೇಲೆ ಅವರ ಆಯ್ಕೆಯ ಪ್ರತಿನಿಧಿಯು ಚುನಾಯಿತರಾಗಿರುವುದಾಗಿ ಘೋಷಿಸಲಾಗುತ್ತದೆ. ಆದುದರಿಂದ ಮತಗಳ ಎಣಿಕೆ ಪ್ರಕ್ರಿಯೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಬೇಕಾಗಿಲ್ಲ.

**2. ಮತ ಎಣಿಕೆ ಏಜೆಂಟರ ಪಾತ್ರ.**

2.1 ಕಾನೂನಿನನ್ವಯ, ಮತಗಳ ಎಣಿಕೆಯನ್ನು, ಆ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿಯ ಮೇಲ್ವಿಚಾರಣೆ ಹಾಗೂ ನಿರ್ದೇಶನಗಳಂತೆ, ಚುನಾವಣಾ ಅಭ್ಯರ್ಥಿಗಳ ಹಾಗೂ ಅವರ ಏಜೆಂಟರ ಸಮ್ಮುಖದಲ್ಲಿ ಮಾಡಲಾಗುತ್ತದೆ. ಮತಗಳ ಎಣಿಕೆಯನ್ನು ಸಹಾಯಕ ರಿಟರ್ನಿಂಗ್ ಅಧಿಕಾರಿಯು ನಡೆಸಲು ಕಾನೂನು ಅಧಿಕಾರ ನೀಡಿದೆ. ಏಕಕಾಲಕ್ಕೆ ಮತಗಳ ಎಣಿಕೆಯನ್ನು ಒಂದಕ್ಕಿಂತ ಹೆಚ್ಚಿನ ಕೊಠಡಿ/ ಸ್ಥಳಗಳಲ್ಲಿ ನಡೆಸಬಹುದು ಹಾಗೂ ಒಂದಕ್ಕಿಂತ ಹೆಚ್ಚಿನ ಟೇಬಲ್ಲು(Table)ಗಳಲ್ಲಿ ನಡೆಸಬಹುದು ಮತ ಎಣಿಕೆ ಏಜೆಂಟರ ಸಹಕಾರದಿಂದ ಮತ ಎಣಿಕೆ ಸೂಪರ್‌ವೈಸರ್ (Counting Supervisor) ಮತ್ತು ಎಣಿಕೆ ಸಹಾಯಕರಿಗೆ (Counting Assistants) ಕೆಲಸ ಸುಗಮವಾಗುತ್ತದೆ.

2.2 ವಿದ್ಯುನ್ಮಾನ ಮತಯಂತ್ರಗಳನ್ನು ಉಪಯೋಗಿಸುತ್ತಿರುವಂತಹ ಒಂದು ಚುನಾವಣಾ ಕ್ಷೇತ್ರಕ್ಕೆ ನೀವು ಎಣಿಕೆ ಏಜೆಂಟರಾಗಿರುವಿರಿ. ಆದ್ದರಿಂದ ನೀವು ವಿದ್ಯುನ್ಮಾನ ಮತಯಂತ್ರದಿಂದ ನಡೆಸಲ್ಪಡುವ ಚುನಾವಣೆಗೆ ನಿಗದಿಪಡಿಸಿದಂತಹ ನಿಯಮ ಮತ್ತು ಪ್ರಕ್ರಿಯೆಗಳ ಪ್ರಸ್ತುತ ಸ್ಥಿತಿಯನ್ನು ಅತ್ಯಂತ ನಿಕಟವಾಗಿ ಅರಿತಿರತಕ್ಕದ್ದು. ನೀವು ವಿದ್ಯುನ್ಮಾನ ಮತಯಂತ್ರದ ಕಾರ್ಯವೈಖರಿಯನ್ನೂ ಸಹ ಅರಿತಿರತಕ್ಕದ್ದು. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿಯಿಂದ ಆಯೋಜಿಸಲ್ಪಡುವ ಮತದಾನ ಯಂತ್ರದ ತರಬೇತಿಗೆ/ ಪ್ರಾತ್ಯಕ್ಷಿಕೆಗೆ ನೀವು ಹಾಜರಾಗತಕ್ಕದ್ದು, ಅಲ್ಲಿ ಮತದಾನ ಯಂತ್ರಗಳನ್ನು ಪ್ರದರ್ಶಿಸಲಾಗುವುದು ಹಾಗೂ ಅದರ ಕಾರ್ಯವೈಖರಿಯ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ವಿವರಿಸಲಾಗುವುದು.

**3. ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರ ವ್ಯವಸ್ಥೆಯನ್ನು ಜಾರಿಯಲ್ಲಿ ತರುವುದು.**

ಭಾರತ ಚುನಾವಣಾ ಆಯೋಗವು ಲೋಕ ಸಭೆ ಹಾಗೂ ವಿಧಾನ ಸಭೆ ಚುನಾವಣೆಗಳನ್ನು ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಿ ಯಶಸ್ವಿಯಾಗಿ ನಿರ್ವಹಿಸಿರುವುದರಿಂದ ರಾಜ್ಯ ಚುನಾವಣಾ ಆಯೋಗವು ಅಧಿಸೂಚನೆ ಸಂ: UDD 126 MLR 2009, ಬೆಂಗಳೂರು ದಿನಾಂಕ:26-5-2011ರ ಮೇರೆಗೆ ನಗರಸಭೆ/ ಪುರಸಭೆ / ಪಟ್ಟಣ ಪಂಚಾಯತಿಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸುತ್ತಿದೆ. ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಮುನಿಸಿಪಾಲಿಟಿಗಳ (ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರ ಅನ್ವಯ ನಗರಸಭೆ/ ಪುರಸಭೆ / ಪಟ್ಟಣ ಪಂಚಾಯತಿಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ ಬಳಕೆಯನ್ನು ಜಾರಿಗೆ ತಂದಿದೆ. ಈ ವಿದ್ಯುನ್ಮಾನ ಮತಯಂತ್ರಗಳನ್ನು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ಎರಡು ಕಂಪೆನಿಗಳು ಉತ್ಪಾದಿಸುತ್ತವೆ,

ಅವುಗಳೆಂದರೆ– ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಹೈದರಾಬಾದ್ (Electronic Corporation of India Limited, Hyderabad) ಹಾಗೂ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಬೆಂಗಳೂರು (Bharat Electronics Limited, Bangalore). ವಿದ್ಯುನ್ಮಾನ ಮತಯಂತ್ರಗಳನ್ನು ಮತಪತ್ರ ಮತ್ತು ಮತ ಪೆಟ್ಟಿಗೆಗಳನ್ನುಪಯೋಗಿಸಿ ನಡೆಸಲಾಗುತ್ತಿದ್ದ ಸಾಂಪ್ರದಾಯಿಕ ಪದ್ಧತಿಯ ಎಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡಿರುವ ಮಾದರಿಯಲ್ಲಿ ರೂಪಿಸಲಾಗಿದೆ.

## 4. ವಿದ್ಯುನ್ಮಾನ ಮತಯಂತ್ರಗಳು ಹಾಗೂ NOTA

4.1 ಒಂದು ವಿದ್ಯುನ್ಮಾನ ಮತಯಂತ್ರವು ಎರಡು ಯೂನಿಟ್ಟುಗಳನ್ನು ಒಳಗೊಂಡಿರುತ್ತದೆ, ಅವುಗಳೆಂದರೆ– ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್. ಈ ಎರಡೂ ಯೂನಿಟ್ಟುಗಳನ್ನು ಕೇಬಲ್ಲಿನ ಮುಖಾಂತರ ಆಂತರಿಕ ಸಂಪರ್ಕ ಕಲ್ಪಿಸಿ ಕಾರ್ಯಾಚರಣೆಗೆ ತರಬಹುದಾಗಿರುತ್ತದೆ. ಕೇಬಲ್ಲಿನ ಒಂದು ತುದಿಯನ್ನು ಬ್ಯಾಲೆಟ್ ಯೂನಿಟ್ಟಿಗೆ ಖಾಯಮ್ಮಾಗಿ ಜೋಡಿಸಲ್ಪಟ್ಟಿರುತ್ತದೆ. ಯಂತ್ರವನ್ನು ಮತಗಳನ್ನು ದಾಖಲು ಮಾಡಲು ಕಾರ್ಯಗತಗೊಳಿಸುವಾಗ ಈ ಕೇಬಲ್ಲಿನ ಇನ್ನೊಂದು ತುದಿಯನ್ನು ಕಂಟ್ರೋಲ್ ಯೂನಿಟ್ಟಿಗೆ ಜೋಡಿಸಲಾಗುತ್ತದೆ.



ಕಂಟ್ರೋಲ್ ಯೂನಿಟ್



ಬ್ಯಾಲೆಟ್ ಯೂನಿಟ್

4.2 ಒಂದು ಬ್ಯಾಲೆಟ್ ಯೂನಿಟ್‌ನಲ್ಲಿ ಗರಿಷ್ಠ ಹದಿನಾರು ಅಭ್ಯರ್ಥಿಗಳನ್ನು ನಮೂದಿಸಬಹುದಾಗಿರುತ್ತದೆ. ಬ್ಯಾಲೆಟ್ ಯೂನಿಟ್‌ನಲ್ಲಿ ಚುನಾವಣೆಯ ವಿವರಗಳನ್ನು– ಕ್ರಮ ಸಂಖ್ಯೆ ಮತ್ತು ಅಭ್ಯರ್ಥಿಯ ಹೆಸರು ಮತ್ತು ಅವರಿಗೆ ನೀಡಲಾದ ಚಿನ್ಹೆಗಳನ್ನು ಒಳಗೊಂಡ ಮತಪತ್ರ (Ballot Paper)ವನ್ನು ಪ್ರದರ್ಶಿಸಲು ಅವಕಾಶವಿರುತ್ತದೆ. ಪ್ರತಿಯೊಬ್ಬ ಅಭ್ಯರ್ಥಿಯ ಹೆಸರಿನ ಮುಂದೆ ಒಂದು ನೀಲಿ ಬಣ್ಣದ ಗುಂಡಿ (Button) ಇದ್ದು, ಇದನ್ನು ಒತ್ತುವುದರಿಂದ ಆ ವ್ಯಕ್ತಿಗೆ ಮತವನ್ನು ನೀಡಬಹುದಾಗಿರುತ್ತದೆ. ಆ ಗುಂಡಿಯ ಪಕ್ಕದಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ಒಂದು ದೀಪವಿದ್ದು, ಒಬ್ಬ ಅಭ್ಯರ್ಥಿಯ ಹೆಸರಿನ ಮುಂದಿನ ನೀಲಿ ಗುಂಡಿಯನ್ನು ಒತ್ತಿದಾಗ ಆ ದೀಪವು ಕೆಂಪಾಗಿ ಬೆಳಗುತ್ತದೆ.

4.3 ಒಂದು ಕಂಟ್ರೋಲ್ ಯೂನಿಟ್ಟಿಗೆ ಒಟ್ಟು ಅರವತ್ನಾಲ್ಕು ಅಭ್ಯರ್ಥಿಗಳನ್ನು ಒಳಗೊಂಡ ನಾಲ್ಕು ಬ್ಯಾಲೆಟ್ ಯೂನಿಟ್‌ಗಳನ್ನು ಸಂಪರ್ಕಿಸಬಹುದಾಗಿರುತ್ತದೆ. ಕಂಟ್ರೋಲ್ ಯೂನಿಟ್‌ನ ಮೇಲ್ಭಾಗದಲ್ಲಿ ಯಂತ್ರವು ಹೊಂದಿರುವ ಮಾಹಿತಿ ಹಾಗೂ ದತ್ತಾಂಶಗಳನ್ನು, ಅಂದರೆ– ಅಭ್ಯರ್ಥಿಗಳ ಸಂಖ್ಯೆ, ಚಲಾಯಿಸಲಾದ ಒಟ್ಟು ಮತಗಳ ಸಂಖ್ಯೆ, ಪ್ರತಿಯೊಬ್ಬ ಅಭ್ಯರ್ಥಿಗೂ ನೀಡಲ್ಪಟ್ಟ ಮತಗಳ ಸಂಖ್ಯೆ, ಮುಂತಾದವುಗಳನ್ನು

ಪ್ರದರ್ಶಿಸುವ ಅವಕಾಶವನ್ನು ಹೊಂದಿರುತ್ತದೆ. ಈ ಭಾಗವನ್ನು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಸೆಕ್ಷನ್(Display Section) ಎಂದು ಕರೆಯಲಾಗುತ್ತದೆ. ಡಿಸ್‌ಪ್ಲೇ ಸೆಕ್ಷನ್‌ನ ಕೆಳಭಾಗದಲ್ಲಿ ಬ್ಯಾಟರಿಯನ್ನು ಅಳವಡಿಸುವ ವಿಭಾಗವಿರುತ್ತದೆ, ಬ್ಯಾಟರಿಯಿಂದಲೇ ಯಂತ್ರವು ಕಾರ್ಯನಿರ್ವಹಿಸುತ್ತದೆ. ಈ ವಿಭಾಗದ ಪಕ್ಕದಲ್ಲಿ ಇನ್ನೊಂದು ವಿಭಾಗವಿದ್ದು, ಅದರಲ್ಲಿ– ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಯಂತ್ರದಲ್ಲಿ ಅಳವಡಿಸಲು ಒಂದು ಗುಂಡಿಯನ್ನು ನೀಡಲಾಗಿದೆ. ಕಂಟ್ರೋಲ್ ಯೂನಿಟ್‌ನ ಈ ಎರಡೂ ವಿಭಾಗಗಳನ್ನೊಳಗೊಂಡ ಭಾಗವನ್ನು ಕ್ಯಾಂಡ್ ಸೆಟ್ ಸೆಕ್ಷನ್(Cand Set Section) ಎಂದು ಕರೆಯಲಾಗುತ್ತದೆ. ಈ ಕ್ಯಾಂಡ್ ಸೆಟ್ ಸೆಕ್ಷನ್‌ನ ಕೆಳಗಡೆ ಕಂಟ್ರೋಲ್ ಯೂನಿಟ್‌ನ ರಿಸಲ್ಟ್ ಸೆಕ್ಷನ್(Result Section) ಇರುತ್ತದೆ. ಈ ವಿಭಾಗವು–

(i) ಮತದಾನವನ್ನು ಮುಕ್ತಾಯ ಮಾಡಲು ಉಪಯೋಗಿಸುವ 'Close' ಗುಂಡಿಯನ್ನು

(ii) ಚುನಾವಣೆಯ ಫಲಿತಾಂಶವನ್ನು ನಿರ್ಧರಿಸಲು 'Result' ಗುಂಡಿಯನ್ನು

(iii) ಅನವಶ್ಯಕವಾದ ದತ್ತಾಂಶವನ್ನು ಯಂತ್ರದಿಂದ ಅಳಿಸಲು 'Clear' ಗುಂಡಿಯನ್ನು ಹೊಂದಿರುತ್ತದೆ.

ಕಂಟ್ರೋಲ್ ಯೂನಿಟ್‌ನ ಕೆಳಭಾಗದಲ್ಲಿ ಎರಡು ಗುಂಡಿಗಳಿರುತ್ತವೆ – ಒಂದು 'Ballot' ಗುಂಡಿಯಾಗಿದ್ದು ಇದನ್ನು ಒತ್ತುವುದರಿಂದ ಬ್ಯಾಲೆಟ್ ಯೂನಿಟ್ ಮತಗಳನ್ನು ನಮೂದಿಸಿಕೊಳ್ಳಲು ಸಿದ್ಧಗೊಳ್ಳುತ್ತದೆ. ಇನ್ನೊಂದು 'Total' ಗುಂಡಿಯಾಗಿದ್ದು, ಇದನ್ನು ಒತ್ತುವುದರಿಂದ ಒತ್ತುವವರೆಗೆ ಚಲಾಯಿಸಲಾದ ಒಟ್ಟು ಮತಗಳನ್ನು ನೋಡಬಹುದಾಗಿರುತ್ತದೆ. **'Total' ಗುಂಡಿಯನ್ನು ಒತ್ತುವುದರಿಂದ ಒಟ್ಟು ಮತಗಳನ್ನು ತೋರಿಸುತ್ತದೆಯೇ ಹೊರತು ಪ್ರತಿಯೊಬ್ಬ ಅಭ್ಯರ್ಥಿಗೆ ನೀಡಲಾದ ವೈಯಕ್ತಿಕ ಮತಗಳನ್ನಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.** ಈ ಭಾಗವನ್ನು ಕಂಟ್ರೋಲ್ ಯೂನಿಟ್‌ನ 'Ballot Section' ಎಂದು ಕರೆಯಲಾಗುತ್ತದೆ.

4.4 ವಿದ್ಯುನ್ಮಾನ ಮತಯಂತ್ರವು ಬ್ಯಾಟರಿಯ ಆಧಾರದ ಮೇಲೆ ನಡೆಯುತ್ತಿದ್ದು, ಇದನ್ನು ಎಲ್ಲಿಯೇ ಆಗಲಿ ಮತ್ತು ಯಾವುದೇ ಪರಿಸ್ಥಿತಿಗಳಲ್ಲಾಗಲಿ ಉಪಯೋಗಿಸಬಹುದಾಗಿರುತ್ತದೆ. ಇದು ಉಪಯೋಗಿಸಲು ಸುಲಭವಾಗಿದ್ದು– ವ್ಯತ್ಯಸ್ತಗೊಳಿಸಲಾಗದ ಹಾಗೂ ದೋಷಗಳಿಂದ ಮುಕ್ತವಾಗಿರುತ್ತದೆ. ಯಂತ್ರದ ಎರಡೂ ಯೂನಿಟ್ಟುಗಳನ್ನು ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ಎರಡು ಬೇರೆ–ಬೇರೆ ಸಾಗಿಸುವ ಪೆಟ್ಟಿಗೆಗಳಲ್ಲಿ ಸರಬರಾಜು ಮಾಡಲಾಗುತ್ತದೆ. ಯಂತ್ರದಲ್ಲಿ ಒಮ್ಮೆ ದಾಖಲಿಸಿದ ಮತದಾನದ ಬಗೆಗಿನ ಮಾಹಿತಿಯು ಅದರ ಸ್ಮೃತಿ(Memory)ಯಲ್ಲಿ ಉಳಿದಿರುತ್ತದೆ, ಯಂತ್ರದಿಂದ ಬ್ಯಾಟರಿಯನ್ನು ತೆಗೆದಾಗಲೂ ಸಹ ಮಾಹಿತಿಯು ಸ್ಮೃತಿಯಲ್ಲಿ ಉಳಿದಿರುತ್ತದೆ.

4.5 ವಿದ್ಯುನ್ಮಾನ ಮತಯಂತ್ರ ಅದರಲ್ಲೂ ಬ್ಯಾಲೆಟ್ ಯೂನಿಟ್ಟನ್ನು ಪ್ರಸ್ತುತ ಮತದಾನ ಪದ್ಧತಿಯ ಎಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡಿರುವ ಮಾದರಿಯಲ್ಲಿ ರೂಪಿಸಲಾಗಿದೆ ಹಾಗೂ ಒಂದೇ ಒಂದು ಬದಲಾವಣೆಯೆಂದರೆ ಮತದಾರನು ತನ್ನ ನೆಚ್ಚಿನ ಅಭ್ಯರ್ಥಿಗೆ ಮತ ನೀಡಲು ಮತಪತ್ರ ಮತ್ತು ಸೀಲನ್ನು ಉಪಯೋಗಿಸಿ ಮತ ಚಲಾಯಿಸುವದರ ಬದಲಾಗಿ ಅಭ್ಯರ್ಥಿಯ ಹೆಸರು ಮತ್ತು ಚಿನ್ಹೆಯ ಮುಂದಿರುವ ನೀಲಿ ಬಣ್ಣದ ಗುಂಡಿಯನ್ನು ಒತ್ತಬೇಕಾಗಿರುತ್ತದೆ. ಮತಯಂತ್ರದ ಮೂಲಕ ಮತ ಚಲಾಯಿಸುವ ಪ್ರಕ್ರಿಯೆಯು ಅತ್ಯಂತ ಸರಳ, ತ್ವರಿತ ಮತ್ತು ತಪ್ಪು ಮಾಡಲು ಆಸ್ಪದವಿಲ್ಲದಂತದ್ದಾಗಿದೆ. ಪ್ರತಿಯೊಂದು ಮತವೂ ಕರಾರುವಾಕ್ಕಾಗಿ ದಾಖಲಾಗುವುದರಿಂದ ಯಾವುದೇ ಕುಲಗೆಟ್ಟ ಮತವಿರುವುದಿಲ್ಲ.

4.6 **ಮತಪತ್ರದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ಅಂಕಣ ಮುದ್ರಿಸುವುದು:** ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ **ರಾಚುಆ:14:ಇಯುಬಿ:2017, ದಿನಾಂಕ: 10–03–2017** ರಂತೆ ಮತಪತ್ರದಲ್ಲಿ **"**NOTA" ಅವಕಾಶ ಕಲ್ಪಿಸಲು ಆದೇಶವಾಗಿರುವುದರಿಂದ, ಭಾರತ್ ಎಲೆಕ್ಟ್ರಾನಿಕ್ಸ್ (ಬಿಇಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರ ಬಳಸುವಲ್ಲಿ ಚುನಾವಣೆಯ ವಿವರಗಳನ್ನು ಮುದ್ರಿಸಲು ಮತಪತ್ರದ ಮೇಲ್ಭಾಗದಲ್ಲಿ ಬಿಟ್ಟಿರುವ ಸ್ಥಳದ ಕೆಳಗೆ ಒಂದು ಮಿ.ಮೀ ಅಗಲದ ಕಪ್ಪು ರೇಖೆ ಇರತಕ್ಕದ್ದು. ಆ ರೇಖೆಯ ಕೆಳಗೆ ಪ್ರತಿ ಅಭ್ಯರ್ಥಿಗೆ ಇರುವ **ಪ್ರತ್ಯೇಕ ಅಂಕಣದಲ್ಲಿ (Panel)** ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ, ಹೆಸರು ಮತ್ತು ಸಂಬಂಧಿಸಿದ ಚಿಹ್ನೆಯನ್ನು ಮುದ್ರಿಸತಕ್ಕದ್ದು. ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆ ಇರುವ ಅಂಕಣದ ನಂತರ ಮತ್ತೊಂದು ಅಂಕಣದಲ್ಲಿ "ಮೇಲ್ಕಂಡ ಯಾರೂ ಅಲ್ಲ" (NOTA) ಇರತಕ್ಕದ್ದು. ಅದರ ಎದುರಿಗೆ ಈ ಕೆಳಕಂಡಂತೆ ಚಿಹ್ನೆಯನ್ನು ಮುದ್ರಿಸತಕ್ಕದ್ದು.



The NOTA symbol

ಭಾರತ್ ಎಲೆಕ್ಟ್ರಾನಿಕ್ಸ್ (ಬಿಇಎಲ್) ಸಂಸ್ಥೆಯು ತಯಾರಿಸಿರುವ ವಿದ್ಯುನ್ಮಾನ ಮತಯಂತ್ರದಲ್ಲಿ ಸ್ಪರ್ಧಿಸುವ ಪ್ರತಿ ಅಭ್ಯರ್ಥಿಗೆ ಸಂಬಂಧಿಸಿದ ಅಂಕಣವು (Panel) 27.5 ಮಿ.ಮೀ (ಉದ್ದ) x 140 ಮಿ.ಮೀ (ಅಗಲ) ಇರತಕ್ಕದ್ದು. ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರತಿ ಅಂಕಣದ ಮಧ್ಯದಲ್ಲಿ 1 ಮಿ.ಮೀ ಅಗಲದ ಕಪ್ಪು ಬಣ್ಣದ ದಪ್ಪ ರೇಖೆ ಇರತಕ್ಕದ್ದು.

ಮತಪತ್ರದಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ (ಪ್ರಪತ್ರ–7) ರಲ್ಲಿ ಕಾಣಿಸಿರುವಂತಹ ಕ್ರಮದಲ್ಲಿಯೇ ಮತಪತ್ರದ ಮೇಲೆ ಮುದ್ರಿಸತಕ್ಕದ್ದು.

ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ಮತಪತ್ರದಲ್ಲಿ ಒಂದರ ನಂತರ ಒಂದನ್ನು ಅನುಕ್ರಮವಾಗಿ ಮುದ್ರಿಸಿ ಕೊನೆಯ ಅಂಕಣದಲ್ಲಿ "ಮೇಲ್ಕಂಡ ಯಾರು ಅಲ್ಲ" (NOTA) ವನ್ನು ಚಿಹ್ನೆಯ ಸಹಿತ ಮುದ್ರಿಸುವುದು. NOTA ಅಂಕಣ ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಅಂಕಣಗಳ ಸಂಖ್ಯೆಯು 16 ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 32ಕ್ಕಿಂತ ಕಡಿಮೆ ಇದ್ದಲ್ಲಿ NOTA ಅಂಕಣದ ನಂತರದ ಜಾಗವನ್ನು ಖಾಲಿ ಬಿಡತಕ್ಕದ್ದು. ಅದೇ ರೀತಿ ಮೂರು ಮತ್ತು ನಾಲ್ಕು ಹಾಳೆಗಳಿರುವ ಮತಪತ್ರಗಳಿಗೂ ಅನುಸರಿಸತಕ್ಕದ್ದು.

ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 15ನ್ನು ಮೀರಿದಲ್ಲಿ, ಮೇಲೆ ತಿಳಿಸಿರುವ ಅಳತೆಯಲ್ಲಿ ಮತಪತ್ರವನ್ನು 2 ಹಾಳೆಗಳಲ್ಲಿ ಮುದ್ರಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 31ನ್ನು ಮೀರಿದಲ್ಲಿ 3 ಹಾಳೆಗಳಲ್ಲಿ ಮುದ್ರಿಸತಕ್ಕದ್ದು ಹಾಗೂ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯು 47ನ್ನು ಮೀರಿದಲ್ಲಿ, ಮತಪತ್ರವನ್ನು 4 ಹಾಳೆಗಳಲ್ಲಿ ಮುದ್ರಿಸತಕ್ಕದು.

ಅಂತಹ ಪ್ರತಿ ಹಾಳೆಗಳಲ್ಲಿ, ಚುನಾವಣೆಯ ವಿವರಗಳನ್ನು ತೋರಿಸಲು ಇರುವ ಜಾಗದಲ್ಲಿ ಹಾಳೆಯ ಸಂಖ್ಯೆಯನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸತಕ್ಕದ್ದು.

NOTA ಒಳಗೊಂಡಂತೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿರುವ ಕ್ರಮದಂತೆಯೇ, ಅದೇ ಭಾಷೆಯಲ್ಲಿಯೇ ಮುದ್ರಿಸತಕ್ಕದ್ದು. (Form-7) ರಂತೆ. ಅಭ್ಯರ್ಥಿಯ ಕ್ರಮ ಸಂಖ್ಯೆಯನ್ನು ಇಂಗ್ಲೀಷ್ ಸಂಖ್ಯೆಯಲ್ಲಿ ಮುದ್ರಿಸತಕ್ಕದ್ದು.

ಸ್ಪರ್ಧಿಸುವ ಅಭ್ಯರ್ಥಿಯ ಕ್ರಮ ಸಂಖ್ಯೆ ಮತ್ತು ಹೆಸರನ್ನು ಎಡ ಭಾಗದಲ್ಲಿ ಹಾಗೂ ಅಭ್ಯರ್ಥಿಯ ಚಿಹ್ನೆಯನ್ನು ಬಲ ಭಾಗದಲ್ಲಿ ಅವರಿಗೆ ಸಂಬಂಧಿಸಿದ ಅಂಕಣದಲ್ಲಿ ಮುದ್ರಿಸತಕ್ಕದ್ದು.

ಮತದಾರನು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗೆ ಮತ ನೀಡದೆ ತನ್ನ ಇಚ್ಛೆಯಂತೆ "ಮೇಲ್ಕಂಡ ಯಾರೂ ಅಲ್ಲ" (NOTA)ಗೆ ಮತ ಹಾಕಲು ಅನುವಾಗುವಂತೆ ಸ್ಪರ್ಧಿಸುತ್ತಿರುವ ಕೊನೆಯ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯನ್ನು ಒಳಗೊಂಡ ಅಂಕಣದ ನಂತರ ಪ್ರತ್ಯೇಕ ಅಂಕಣ ಇರತಕ್ಕದ್ದು. "ಮೇಲ್ಕಂಡ ಯಾರೂ ಅಲ್ಲ" ಈ ಪದಗಳು ಅಭ್ಯರ್ಥಿಗಳ ಹೆಸರನ್ನು ಯಾವ ಭಾಷೆಯಲ್ಲಿ ಮುದ್ರಿಸಲಾಗಿದೆಯೋ ಅದೇ ಭಾಷೆಯಲ್ಲಿ ಇರತಕ್ಕದ್ದು.

**5. ಮತ ಎಣಿಕೆ ಏಜೆಂಟರಿಗೆ ಇರಬೇಕಾದ ಅರ್ಹತೆಗಳು.**

5.1 ಎಣಿಕೆ ಏಜೆಂಟರುಗಳಾಗಿ ನೇಮಕವಾಗುವ ವ್ಯಕ್ತಿಗಳಿಗೆ ಕಾನೂನು ಯಾವುದೇ ನಿರ್ದಿಷ್ಟ ಅರ್ಹತೆಯನ್ನು ನಿಗದಿಪಡಿಸಿಲ್ಲ. ಆದಾಗ್ಯೂ ತಮ್ಮ ಹಿತಾಸಕ್ತಿಗಳನ್ನು ಸರಿಯಾಗಿ ಕಾಪಾಡಿಕೊಂಡು ಬರುವುದಕ್ಕಾಗಿ ಪ್ರೌಢಿಮೆ ಹೊಂದಿದ ಮತ್ತು ವಯಸ್ಕರಾದ ವ್ಯಕ್ತಿಗಳನ್ನು ತಮ್ಮ ಎಣಿಕೆ ಏಜೆಂಟರನ್ನಾಗಿ ನೇಮಿಸಲು ಅಭ್ಯರ್ಥಿಗಳಿಗೆ ಸಲಹೆ ನೀಡಲಾಗಿದೆ.

5.2 ಚುನಾವಣಾ ಆಯೋಗದ ಸ್ಥಾಯೀ ಸೂಚನೆಗಳಿಗನುಸಾರವಾಗಿ (Standing Instructions) ಭದ್ರತಾ ಸಿಬ್ಬಂದಿಯವರು ಮತ ಎಣಿಕೆ ಕೊಠಡಿಯನ್ನು (Counting Hall) ಪ್ರವೇಶಿಸಲು ಅನುಮತಿ ನೀಡಲಾಗುವುದಿಲ್ಲ. ಆದ್ದರಿಂದ, ರಾಜ್ಯ ಸರ್ಕಾರದ ವೆಚ್ಚದಲ್ಲಿ ಭದ್ರತಾ ಸಿಬ್ಬಂದಿಯನ್ನು ನೀಡಲಾಗಿರುವ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಚಿವರ ಅಥವಾ ಲೋಕ ಸಭಾ ಸದಸ್ಯರು ಅಥವಾ ವಿಧಾನಸಭಾ ಸದಸ್ಯರು ಎಣಿಕೆ ಕೊಠಡಿಯನ್ನು ಪ್ರವೇಶಿಸುವಾಗ ತಮ್ಮ ಭದ್ರತಾ ಸಿಬ್ಬಂದಿಯ ಜೊತೆಗೆ ಮತ ಎಣಿಕೆ ಕೊಠಡಿಯನ್ನು (Counting Hall) ಪ್ರವೇಶಿಸಲು ಅನುಮತಿ ನೀಡಲಾಗುವುದಿಲ್ಲವಾದ್ದರಿಂದ ಅಥವಾ ಯಾರೇ ಭದ್ರತಾ ಸಿಬ್ಬಂದಿಯನ್ನು ಹೊಂದಿರದೆ ಮತ ಎಣಿಕೆ ಕೊಠಡಿಯನ್ನು(Counting Hall) ಪ್ರವೇಶಿಸಲು ಅವರಿಗೆ ಅನುಮತಿ ನೀಡುವ ಮೂಲಕ ಅವರ ಭದ್ರತಾ ಸಿಬ್ಬಂದಿಯನ್ನು ಸಂದಿಗ್ಧಕ್ಕೆ ಸಿಲುಕಿಸಬಾರದಾದ್ದರಿಂದ ಚುನಾವಣಾ ಏಜೆಂಟರಾಗಿ ಅಥವಾ ಮತ ಎಣಿಕೆ ಏಜೆಂಟರಾಗಿ ಕಾರ್ಯ ನಿರ್ವಹಿಸಲು ಅವರಿಗೆ ಅನುಮತಿ ನೀಡಲಾಗುವುದಿಲ್ಲ.

5.3 ಯಾರೇ ಸರ್ಕಾರಿ ನೌಕರನೂ ಸಹ ಅಭ್ಯರ್ಥಿಯ ಎಣಿಕೆ ಏಜೆಂಟನಾಗುವಂತಿಲ್ಲ. [ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಪ್ರಕರಣ 35] ಒಂದು ವೇಳೆ ಅವನು ಏಜೆಂಟನಾದಲ್ಲಿ, ಅವನಿಗೆ 3 ತಿಂಗಳವರೆಗೆ ವಿಸ್ತರಿಸಬಹುದಾದ ಸೆರೆಮನೆವಾಸ ಅಥವಾ ದಂಡ ಅಥವಾ ಎರಡರಿಂದಲೂ ಶಿಕ್ಷಿಸಲ್ಪಡುತ್ತಾನೆ.

**6. ನೇಮಕವಾಗಬಹುದಾದ ಮತ ಎಣಿಕೆ ಏಜೆಂಟರ ಸಂಖ್ಯೆ.**

6.1 ಪ್ರತಿಯೊಬ್ಬ ಅಭ್ಯರ್ಥಿಗೂ ಎಷ್ಟು ಎಣಿಕೆ ಟೇಬಲ್ಲುಗಳಿವೆಯೋ ಅಷ್ಟು ಎಣಿಕೆ ಏಜೆಂಟರನ್ನು ಹಾಗೂ ರಿಟರ್ನಿಂಗ್ ಅಧಿಕಾರಿಯ ಟೇಬಲ್ಲನ್ನು ಪರಿವೀಕ್ಷಿಸಲು ಮತ್ತೊಬ್ಬ ಏಜೆಂಟನನ್ನು ನೇಮಿಸಲು ಅನುಮತಿಸಲಾಗಿದೆ. ಚುನಾವಣಾ ಆಯೋಗದ ನಿರ್ದೇಶನಗಳಂತೆ ಪ್ರತಿಯೊಂದು ಎಣಿಕಾ ಕೊಠಡಿಯಲ್ಲಿ

ಎಣಿಕೆಗಾಗಿ ಹದಿನಾಲ್ಕು ಟೇಬಲ್ಲುಗಳು ಮತ್ತು ರಿಟರ್ನಿಂಗ್ ಅಧಿಕಾರಿಗೆ ಒಂದು ಟೇಬಲ್ಲು ಇರತಕ್ಕದ್ದು. ರಿಟರ್ನಿಂಗ್ ಅಧಿಕಾರಿಯ ಟೇಬಲ್ಲನ್ನೂ ಸೇರಿಸಿ ಎಣಿಕಾ ಟೇಬಲ್ಲುಗಳ ಸಂಖ್ಯೆ 15ನ್ನು ಮೀರುವುದಿಲ್ಲವಾದ್ದರಿಂದ, ಒಬ್ಬ ಅಭ್ಯರ್ಥಿಯು ನೇಮಿಸುವ ಎಣಿಕಾ ಏಜೆಂಟರುಗಳ ಸಂಖ್ಯೆ ಸಾಮಾನ್ಯವಾಗಿ 15ನ್ನು ಮೀರತಕ್ಕದ್ದಲ್ಲ.

6.2 ಆಯೋಗವು ತನ್ನ ವಿಶೇಷ ನಿರ್ದೇಶನಗಳಂತೆ 15ಕ್ಕಿಂತಲೂ ಹೆಚ್ಚಿನ ಟೇಬಲ್ಲುಗಳನ್ನು ಒದಗಿಸಲು ರಿಟರ್ನಿಂಗ್ ಅಧಿಕಾರಿಗೆ ಅನುಮತಿಸಬಹುದು. ಅಂತಹ ಸಂದರ್ಭದಲ್ಲಿ ಅಭ್ಯರ್ಥಿಯೂ 15ಕ್ಕಿಂತ ಹೆಚ್ಚು ಮತ್ತು ರಿಟರ್ನಿಂಗ್ ಅಧಿಕಾರಿಯಿಂದ ಒದಗಿಸಿದ ಟೇಬಲ್ಲುಗಳ ಸಂಖ್ಯೆಯಷ್ಟೆ ಏಜೆಂಟರನ್ನು ನೇಮಿಸಲು ಅನುಮತಿಸಲಾಗಿದೆ.

6.3 ಕಾನೂನಿನನ್ವಯ– ರಿಟರ್ನಿಂಗ್ ಅಧಿಕಾರಿಯು, ಲಿಖಿತ ರೂಪದಲ್ಲಿ ಪ್ರತಿಯೊಂದು ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟರಿಗೆ ಮತದಾನಕ್ಕಾಗಿ ನಿಗದಿಪಡಿಸಿದ ದಿನಾಂಕಕ್ಕಿಂತ ಒಂದು ವಾರದ ಮುಂಚೆಯೇ ಮತದಾನದ ಎಣಿಕೆಗಾಗಿ ನಿಗದಿಪಡಿಸಿದ ಸ್ಥಳ, ದಿನಾಂಕ ಮತ್ತು ಪ್ರಾರಂಭವಾಗುವ ಸಮಯಗಳ ಬಗ್ಗೆ ತಿಳಿಸುತ್ತಾರೆ. ಅವರುಗಳು ಎಣಿಕಾ ಏಜೆಂಟರುಗಳನ್ನು ನೇಮಿಸಲು ಅನುಕೂಲವಾಗುವಂತೆ ಎಣಿಕಾ ಕೊಠಡಿಯಲ್ಲಿ ಒದಗಿಸುವ ಎಣಿಕಾ ಟೇಬಲ್ಲುಗಳ ಸಂಖ್ಯೆಯನ್ನೂ ಸಹ ಮುಂಚಿತವಾಗಿಯೇ ತಿಳಿಸುತ್ತಾರೆ.

## 7. ಮತ ಎಣಿಕೆ ಏಜೆಂಟರ ನೇಮಕಾತಿ (ಪ್ರಪತ್ರ 11)

7.1 **ಮತ ಎಣಿಕೆ ಏಜೆಂಟರ ನೇಮಕಾತಿಯನ್ನು ಸ್ವತ: ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಮಾಡಬೇಕಿರುತ್ತದೆ.** ಅಂತಹ ನೇಮಕಾತಿಯನ್ನು ಕರ್ನಾಟಕ ಪೌರಸಭೆಗಳ (ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರ ಅನ್ವಯ ಪ್ರಪತ್ರ 11ರಲ್ಲಿ ಮಾಡಬೇಕಿರುತ್ತದೆ. ಆ ನಮೂನೆಯಲ್ಲಿ ಎಣಿಕಾ ಏಜೆಂಟನ ಹೆಸರು ಮತ್ತು ವಿಳಾಸವನ್ನು ಭರ್ತಿಮಾಡತಕ್ಕದ್ದು ಹಾಗೂ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಆ ನಮೂನೆಗೆ ಸ್ವತ: ಸಹಿ ಮಾಡತಕ್ಕದ್ದು. ತನ್ನ ನೇಮಕಾತಿಯನ್ನು ಒಪ್ಪಿಕೊಳ್ಳುವದಕ್ಕಾಗಿ ಆ ಏಜೆಂಟನೂ ನಮೂನೆಯಲ್ಲಿ ಸಹಿ ಮಾಡತಕ್ಕದ್ದು. ಪ್ರತಿಯೊಬ್ಬರಿಗೂ ಮೇಲೆ ತಿಳಿಸಿದ ರೀತಿಯಲ್ಲಿ ತಯಾರಿಸಿ ಸಹಿ ಮಾಡಿದ ನಮೂನೆಯ **ಎರಡು ಪ್ರತಿಗಳನ್ನು ಭಾವಚಿತ್ರದೊಂದಿಗೆ ತಯಾರಿಸತಕ್ಕದ್ದು**. ಆ ಎರಡರಲ್ಲಿ ಒಂದು ನಮೂನೆಯನ್ನು ಅಭ್ಯರ್ಥಿ/ ಚುನಾವಣಾ ಏಜೆಂಟನು ರಿಟರ್ನಿಂಗ್ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಇನ್ನೊಂದು ನಮೂನೆಯನ್ನು ರಿಟರ್ನಿಂಗ್ ಅಧಿಕಾರಿಗೆ ತೋರಿಸುವ ಸಲುವಾಗಿ ಎಣಿಕೆ ಏಜೆಂಟನಿಗೆ ನೀಡತಕ್ಕದ್ದು.

7.2 ಅಭ್ಯರ್ಥಿಯು ತನ್ನ ಎಲ್ಲಾ ಎಣಿಕೆ ಏಜೆಂಟರನ್ನು ಪ್ರಪತ್ರ 11ರಲ್ಲಿ ಒಂದೇ ನೇಮಕಾತಿ ಪತ್ರದಲ್ಲಿ ನೇಮಿಸಬಹುದಾಗಿರುತ್ತದೆ. ಆ ಸಂದರ್ಭದಲ್ಲಿ ಎಲ್ಲಾ ಎಣಿಕೆ ಏಜೆಂಟರು ತಮ್ಮ ನೇಮಕಾತಿಯನ್ನು ಒಪ್ಪಿಕೊಂಡಂತೆ ಅದೇ ನೇಮಕಾತಿ ಪತ್ರದಲ್ಲಿ ಸಹಿ ಮಾಡಬೇಕಿರುತ್ತದೆ.

7.3 ಸಹಿಯ ಬಗ್ಗೆ ಯಾವುದೇ ಸಂಶಯವಿಲ್ಲದಿದ್ದ ಪಕ್ಷದಲ್ಲಿ, ನೇಮಕಾತಿ ಪ್ರಪತ್ರದಲ್ಲಿ ಹಾಕಿರುವ ಅಭ್ಯರ್ಥಿಯ ಪ್ರತಿನಕಲು ಸಹಿಯನ್ನು(Facsimile Signature) ಒಪ್ಪಬಹುದಾಗಿರುತ್ತದೆ.

## 8. ಮತ ಎಣಿಕೆ ಏಜೆಂಟರನ್ನು ನೇಮಕ ಮಾಡಲು ಕಾಲಮಿತಿ.

8.1 ಚುನಾವಣಾ ಆಯೋಗದ ನಿರ್ದೇಶನದಂತೆ – ಎಲ್ಲಾ ಚುನಾವಣಾ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ, ಮತಗಳ ಎಣಿಕೆಗಾಗಿ ನಿಗದಿಪಡಿಸಿದ

ದಿನಾಂಕಕ್ಕಿಂತ ಐದು ದಿನಗಳ ಮುಂಚಿನ ದಿನದಂದು ಸಂಜೆ 5–00 ಗಂಟೆಯೊಳಗಾಗಿ ಪ್ರತಿಯೊಬ್ಬ ಸ್ಪರ್ಧಿಸಿರುವ ಅಭ್ಯರ್ಥಿಯು ತಮ್ಮ ಎಣಿಕೆ ಏಜೆಂಟರ ಪಟ್ಟಿಯನ್ನು ಅವರವರ ಭಾವಚಿತ್ರಗಳೊಂದಿಗೆ ರಿಟರ್ನಿಂಗ್ ಅಧಿಕಾರಿಗೆ ನೀಡತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಅಂತಹ ಪ್ರತಿಯೊಬ್ಬ ಏಜೆಂಟನಿಗೂ ಗುರುತಿನ ಚೀಟಿಯನ್ನು ತಯಾರಿಸಿ, ಅವುಗಳನ್ನು ಅಭ್ಯರ್ಥಿಗೆ ನೀಡುತ್ತಾರೆ.

8.2 ಎಣಿಕೆ ಏಜೆಂಟರು ಮತಗಳ ಎಣಿಕೆಗೆ ಹಾಜರಾದ ಸಂದರ್ಭದಲ್ಲಿ ಅವನಿಗೆ ನೀಡಲಾದ ಗುರುತಿನ ಚೀಟಿ ಹಾಗೂ ನೇಮಕಾತಿ ಪತ್ರವನ್ನು ತೋರಿಸತಕ್ಕದು.

8.3 ಮತಗಳ ಎಣಿಕೆ ಪ್ರಾರಂಭವಾಗುವ ಕನಿಷ್ಟ ಒಂದು ಗಂಟೆಯ ಮುಂಚೆ ತನ್ನ ನೇಮಕಾತಿ ಪತ್ರ ಹಾಗೂ ಗುರುತಿನ ಚೀಟಿಯನ್ನು ಎಣಿಕೆ ಏಜೆಂಟನು ರಿಟರ್ನಿಂಗ್ ಅಧಿಕಾರಿಗೆ ತೋರಿಸತಕ್ಕದ್ದು. ಮೇಲೆ ತಿಳಿಸಿದ ಕಾಲಾವಕಾಶದ ನಂತರ ಸ್ವೀಕೃತವಾದ ಯಾವುದೇ ನೇಮಕಾತಿ ಪತ್ರವನ್ನು ರಿಟರ್ನಿಂಗ್ ಅಧಿಕಾರಿಯು ಸ್ವೀಕರಿಸುವುದಿಲ್ಲ.

**9. ಮತ ಎಣಿಕೆ ಏಜೆಂಟನ ನೇಮಕಾತಿಯನ್ನು ರದ್ದುಪಡಿಸುವುದು (ಪ್ರಪತ್ರ 13).**

9.1 ಎಣಿಕೆ ಏಜೆಂಟನ ನೇಮಕಾತಿಯನ್ನು, ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ರದ್ದು ಪಡಿಸುವ ಅಧಿಕಾರವನ್ನು ಹೊಂದಿರುತ್ತಾನೆ.

9.2 ಇಂತಹ ರದ್ದತಿಯನ್ನು ಕರ್ನಾಟಕ ಪೌರಸಭೆಗಳ (ಕೌನ್ಸಿಲರ್‌ಗಳ ಚುನಾವಣೆ) ನಿಯಮಗಳು, 1977ರ ಅನ್ವಯ ಪ್ರಪತ್ರ 13ರಲ್ಲಿ ಮಾಡಬೇಕಿರುತ್ತದೆ ಹಾಗೂ ಇದನ್ನು ರಿಟರ್ನಿಂಗ್ ಅಧಿಕಾರಿಗೆ ನೀಡಿದ ಸಮಯದಿಂದಲೇ ರದ್ದತಿಯು ಜಾರಿಗೆ ಬರುತ್ತದೆ. ಇಂತಹ ಸಂದರ್ಭದಲ್ಲಿ ಮತಗಳ ಎಣಿಕೆ ಪ್ರಾರಂಭವಾಗುವ ಮುಂಚೆ ಯಾವುದೇ ಸಮಯದಲ್ಲಿ ರದ್ದತಿಗೊಳಿಸಿದ ಏಜೆಂಟನ ಜಾಗದಲ್ಲಿ ಹೊಸ ಏಜೆಂಟನನ್ನು ನೇಮಿಸಲು ಅಭ್ಯರ್ಥಿಯು ಅಧಿಕಾರ ಹೊಂದಿರುತ್ತಾನೆ. ಆದರೆ ಮತಗಳ ಎಣಿಕೆ ಪ್ರಾರಂಭಗೊಂಡ ನಂತರ ಹೊಸ ಎಣಿಕೆ ಏಜೆಂಟನ ನೇಮಕಾತಿಯು ಸಾಧ್ಯವಿರುವುದಿಲ್ಲ.

9.3 ಹೊಸ ಏಜೆಂಟನ ನೇಮಕಾತಿಯನ್ನು ಮೇಲಿನ ಕಂಡಿಕೆ 7ರಲ್ಲಿ ತಿಳಿಸಿರುವಂತೆಯೇ ಮಾಡಬೇಕಿರುತ್ತದೆ.

**10. ಮತ ಎಣಿಕೆ ಕೊಠಡಿಗೆ ಎಣಿಕೆ ಏಜೆಂಟನ ಪ್ರವೇಶ.**

10.1 ತನ್ನ ನೇಮಕಾತಿ ಪತ್ರ ಹಾಗೂ ಗುರುತಿನ ಚೀಟಿಯನ್ನು ರಿಟರ್ನಿಂಗ್ ಅಧಿಕಾರಿಗೆ ತೋರಿಸಿದ ನಂತರ ಎಣಿಕೆ ಏಜೆಂಟನು ಮತಗಳ ಬಗ್ಗೆ ಗೌಪ್ಯವನ್ನು ಕಾಪಾಡುವ ಬಗ್ಗೆ ಅವನ ನೇಮಕಾತಿ ಪತ್ರದಲ್ಲಿ ನೀಡಲಾದ ಮುಚ್ಚಳಿಕೆ (Declaration)ಗೆ ರಿಟರ್ನಿಂಗ್ ಅಧಿಕಾರಿಯ ಎದುರಿಗೆ ಸಹಿ ಮಾಡಬೇಕಿರುತ್ತದೆ. ನೇಮಕಾತಿ ಪತ್ರ, ಗುರುತಿನ ಚೀಟಿ ಮತ್ತು ಮುಚ್ಚಳಿಕೆಯನ್ನು ಪರಿಶೀಲಿಸಿದ ನಂತರವೇ ರಿಟರ್ನಿಂಗ್ ಅಧಿಕಾರಿಯು ಎಣಿಕೆ ಏಜೆಂಟನಿಗೆ ಎಣಿಕೆ ಕೊಠಡಿಯನ್ನು ಪ್ರವೇಶಿಸಲು ಅನುಮತಿ ನೀಡುತ್ತಾರೆ.

10.2 ಯಾವುದೇ ಎಣಿಕೆ ಏಜೆಂಟನನ್ನು ತಪಾಸಣೆಗೆ ಒಳಪಡಿಸುವ ಅಧಿಕಾರವನ್ನು ರಿಟರ್ನಿಂಗ್ ಅಧಿಕಾರಿಯು ಹೊಂದಿರುತ್ತಾರೆ.

**11. ಮತ ಎಣಿಕೆ ಏಜೆಂಟರಿಗೆ ಬ್ಯಾಡ್ಜುಗಳನ್ನು ನೀಡುವುದು.**

ಪ್ರತಿಯೊಬ್ಬ ಎಣಿಕೆ ಏಜೆಂಟನಿಗೂ ಅವನು ಯಾವ ಅಭ್ಯರ್ಥಿಯ ಏಜೆಂಟನೆನ್ನುವ ಬಗ್ಗೆ ಸೂಚಿಸುವ ಹಾಗೂ ಅವನು ಯಾವ ಎಣಿಕೆ ಟೇಬಲಿನಲ್ಲಿ ನಡೆಯುವ ಎಣಿಕೆಯನ್ನು ವೀಕ್ಷಿಸುವನು ಎನ್ನುವುದರ ವಿವರ ಸೂಚಿಸುವ ಬ್ಯಾಡ್ಜನ್ನು ರಿಟರ್ನಿಂಗ್ ಅಧಿಕಾರಿಯು ಅವನಿಗೆ ನೀಡಿರುತ್ತಾರೆ. ಅವನಿಗೆ

ಸೂಚಿಸಲಾದ ಟೇಬಲ್ಲಿನಲ್ಲಿ ಅವನು ಕುಳಿತಿರತಕ್ಕದ್ದು ಹಾಗೂ ಕೊಠಡಿಯಲ್ಲಿ ಅನಗತ್ಯವಾಗಿ ಓಡಾಡಲು ಅವಕಾಶವಿಲ್ಲ. ಆದರೆ ಅಭ್ಯರ್ಥಿ, ಅವನ ಚುನಾವಣಾ ಏಜೆಂಟ್, ಅವರುಗಳ ಗೈರುಹಾಜರಿಯಲ್ಲಿ ರಿಟರ್ನಿಂಗ್ ಅಧಿಕಾರಿಯ ಟೇಬಲ್ಲಿನ ಎಣಿಕೆ ಏಜೆಂಟನು ಮಾತ್ರ ಕೊಠಡಿಯಲ್ಲಿನ ಇತರೆ ಎಲ್ಲಾ ಟೇಬಲ್ಲುಗಳಿಗೆ ಹೋಗಲು ಅವಕಾಶ ನೀಡಿದೆ.

**12. ಮತ ಎಣಿಕೆ ನಡೆಯುವ ಕೊಠಡಿಯಲ್ಲಿ ಶಿಸ್ತು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವುದು.**

12.1 ಎಣಿಕೆ ಕೊಠಡಿಯ ಒಳಗಡೆ ಕಟ್ಟುನಿಟ್ಟಿನ ಶಿಸ್ತು ಮತ್ತು ಸುವ್ಯವಸ್ಥೆಯನ್ನು ಪಾಲಿಸಲು ಪ್ರತಿಯೊಬ್ಬರೂ ರಿಟರ್ನಿಂಗ್ ಅಧಿಕಾರಿಯೊಂದಿಗೆ ಸಹಕರಿಸತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ನೀಡುವ ಎಲ್ಲಾ ನಿರ್ದೇಶನಗಳನ್ನು ಅವರು ಪಾಲಿಸತಕ್ಕದ್ದು. ಒಂದು ವೇಳೆ **ನಿರ್ದೇಶನಗಳನ್ನು ಪಾಲಿಸದೇ ಇದ್ದಲ್ಲಿ ಅಂತಹ ವ್ಯಕ್ತಿಯನ್ನು ರಿಟರ್ನಿಂಗ್ ಅಧಿಕಾರಿಯು ಎಣಿಕೆ ಕೊಠಡಿಯಿಂದ ಹೊರಹಾಕುವ ಅಧಿಕಾರವನ್ನೂ ಹೊಂದಿರುತ್ತಾನೆಂದು ತಿಳಿದಿರತಕ್ಕದ್ದು.**

12.2 ಮತ ಎಣಿಕೆ ಪ್ರಕ್ರಿಯೆಯು ಚಾಲನೆಯಲ್ಲಿರುವಾಗ ಯಾವುದೇ ಎಣಿಕೆ ಏಜೆಂಟರು ಅಥವಾ ಇತರರು ಎಣಿಕೆ ಕೊಠಡಿಯಿಂದ ಹೊರಗಡೆ ಹೋಗಲು ಅವಕಾಶವಿರುವುದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಮ್ಮೆ ಎಣಿಕೆ ಏಜೆಂಟರು ಹಾಗೂ ಇತರರು ಎಣಿಕೆ ಕೊಠಡಿಯನ್ನು ಪ್ರವೇಶಿಸಿದ ನಂತರ, ಸಾಮಾನ್ಯವಾಗಿ ಫಲಿತಾಂಶ ಪ್ರಕಟವಾದ ನಂತರವಷ್ಟೇ ಕೊಠಡಿಯಿಂದ ಹೊರಹೋಗಲು ಅನುಮತಿಸಲಾಗುವುದು.

12.3 ಎಣಿಕೆ ಕೊಠಡಿಯ ಸಮೀಪದಲ್ಲಿಯೇ ಎಲ್ಲಾ ಸಮಂಜಸವಾದ ಸೌಕರ್ಯಗಳನ್ನು ಅಂದರೆ ಕುಡಿಯುವ ನೀರು, ಅಲ್ಪಾಹಾರ (Refreshments), ಶೌಚಾಲಯ ಮತ್ತು ಇತರೆ ವ್ಯವಸ್ಥೆಯನ್ನು ಒದಗಿಸಲಾಗಿರುತ್ತದೆ.

12.4 ಎಣಿಕೆ ಕೊಠಡಿಯ ಒಳಗಡೆ ಮೊಬೈಲ್ ಫೋನನ್ನು ತೆಗೆದುಕೊಂಡು ಹೋಗಲು ಎಣಿಕೆ ಏಜೆಂಟರಿಗೆ ಅವಕಾಶ ನೀಡಲಾಗುವುದಿಲ್ಲ. ವೀಕ್ಷಕರು/ ಸೂಕ್ಷ್ಮ ವೀಕ್ಷಕರು (Observers/ Micro Observers), ಎಣಿಕೆ ಮೇಲ್ವಿಚಾರಕರು ಮಾತ್ರ ತಮ್ಮ ಮೊಬೈಲ್ ಫೋನನ್ನು ತೆಗೆದುಕೊಂಡು ಹೋಗಲು ಅವಕಾಶ ನೀಡಿದೆ. ಆದರೂ ಅವರು ತಮ್ಮ ಮೊಬೈಲ್ ಫೋನ್‌ಗಳನ್ನು ನಿಶ್ಶಬ್ಧ ಸ್ಥಿತಿಯಲ್ಲಿ ಇಡತಕ್ಕದ್ದು.

**13. ಮತ ಎಣಿಕೆ ಕೇಂದ್ರದಲ್ಲಿ ಧೂಮಪಾನ ನಿಷೇಧಿಸಿದೆ.**

ಎಣಿಕೆ ಕೊಠಡಿಯ ಒಳಗಡೆ ಅಥವಾ ಆವರಣದಲ್ಲಿ ಎಣಿಕೆ ಸಿಬ್ಬಂದಿಯಾಗಲಿ ಅಥವಾ ಅಭ್ಯರ್ಥಿಯಾಗಲಿ ಅಥವಾ ಅವನ ಚುನಾವಣಾ/ ಎಣಿಕೆ ಏಜೆಂಟ(ರು)ಗಳಾಗಲಿ ಧೂಮಪಾನ ಮಾಡುವಂತಿಲ್ಲ.

**14. ಮತ ಎಣಿಕೆ ಏಜೆಂಟರಿಗೆ ಆಸನ ವ್ಯವಸ್ಥೆ.**

14.1 ಮತ ಎಣಿಕೆಯನ್ನು ಸಾಲಾಗಿ ಜೋಡಿಸಿರುವ ಟೇಬಲ್ಲುಗಳ ಮೇಲೆ ನಡೆಸಲಾಗುತ್ತದೆ. ಪ್ರತಿಯೊಂದು ಸಾಲಿನಲ್ಲಿರುವ ಟೇಬಲ್ಲುಗಳಿಗೆ ಕ್ರಮ ಸಂಖ್ಯೆಯನ್ನು ನೀಡಲ್ಪಟ್ಟಿರುತ್ತದೆ.

14.2 ಪ್ರತಿಯೊಂದು ಎಣಿಕೆ ಟೇಬಲ್ಲಿನ ಮೇಲೆಯೂ, ಈ ಕೆಳಗೆ ತೋರಿದ ವರ್ಗಗಳ ಪ್ರಾಶಸ್ತ್ಯದ ಮೇರೆಗೆ ಎಣಿಕೆ ಏಜೆಂಟರಿಗೆ ಆಸನದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

(i) ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು.

(ii) ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು.

(iii) ಇತರೆ ರಾಜ್ಯಗಳ ಮಾನ್ಯತೆ ಪಡೆದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು – ಯಾರಿಗೆ ಆ ಪಕ್ಷದ ಚಿನ್ಹೆಯನ್ನು ಈ ಕ್ಷೇತ್ರದಲ್ಲಿ ಉಪಯೋಗಿಸಲು ಅನುಮತಿ ನೀಡಲಾಗಿರುವುದೋ ಅಂತಹ ಅಭ್ಯರ್ಥಿಗಳಿಗೆ.

(iv) ನೋಂದಾಯಿಸಲ್ಪಟ್ಟ ಮಾನ್ಯತೆ ಪಡೆಯದ ಪಕ್ಷಗಳ ಅಭ್ಯರ್ಥಿಗಳಿಗೆ.

(v) ಪಕ್ಷೇತರ ಅಭ್ಯರ್ಥಿಗಳಿಗೆ.

**15. ಮತ ಎಣಿಕೆಯ ಟೇಬಲ್ಲುಗಳಿಗೆ ಅಡ್ಡಪಟ್ಟಿ ವ್ಯವಸ್ಥೆ.**

ಪ್ರತಿಯೊಂದು ಎಣಿಕೆ ಕೊಠಡಿಯಲ್ಲಿ– ಎಣಿಕೆ ಏಜೆಂಟರು ವಿದ್ಯುನ್ಮಾನ ಮತ ಯಂತ್ರವನ್ನು ಮುಟ್ಟದಂತೆ ಪ್ರತಿಯೊಂದು ಟೇಬಲ್ಲಿಗೂ ಅಡ್ಡಪಟ್ಟಿಗಳನ್ನು ಅಳವಡಿಸಲಾಗಿರುತ್ತದೆ. ಆದಾಗ್ಯೂ ಎಣಿಕೆ ಟೇಬಲ್ಲಿನಲ್ಲಿ ನಡೆಯುವ ಎಣಿಕೆ ಪ್ರಕ್ರಿಯೆಯನ್ನು ನೋಡಲು ಎಣಿಕೆ ಏಜೆಂಟನಿಗೆ ಎಲ್ಲಾ ಯುಕ್ತ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಎಣಿಕೆ ಪ್ರಕ್ರಿಯೆಯು ಸರಿಯಾಗಿ ಕಂಡುಬರುವಂತೆ, ಅಡ್ಡಪಟ್ಟಿಗಳು ಪಾರದರ್ಶಕವಾಗಿರುತ್ತವೆ ಅಥವಾ ಅದನ್ನು ಕಟ್ಟಲು ಉಪಯೋಗಿಸಿದ ಬೊಂಬುಗಳ ಮಧ್ಯದ ಜಾಗವು ಎಣಿಕೆ ಪ್ರಕ್ರಿಯೆಯನ್ನು ನೋಡಲು ಅಡೆತಡೆಯಾಗದಂತೆ ರಿಟರ್ನಿಂಗ್ ಅಧಿಕಾರಿಯು ಭರವಸೆ ಕೊಡತಕ್ಕದ್ದು. ಅಂತಹ ಅಡ್ಡಪಟ್ಟಿಗಳನ್ನು ಎಣಿಕೆ ಪ್ರಕ್ರಿಯೆಯು ನಡೆಯುವಾಗ ಅನಧಿಕೃತ ವ್ಯಕ್ತಿಗಳು ವಿದ್ಯುನ್ಮಾನ ಮತಯಂತ್ರವನ್ನು ಮುಟ್ಟದಂತೆ ಅಥವಾ ಬದಲಾಯಿಸದಂತಹ ರೀತಿಯಲ್ಲಿ ವ್ಯವಸ್ಥೆಗೊಳಿಸುವುದು. ರಿಟರ್ನಿಂಗ್ ಅಧಿಕಾರಿಯ ವಿವೇಚನೆಗೆ ಒಳಪಟ್ಟಿರುತ್ತದೆ.

**16. ರಹಸ್ಯ ಪಾಲನೆ.**

16.1 ಎಣಿಕೆ ಕೊಠಡಿಯೊಳಗಡೆ ಇರುವ ಪ್ರತಿಯೊಬ್ಬ ವ್ಯಕ್ತಿಯು ಕಾನೂನಿನನ್ವಯ ಮತಗಳ ಬಗ್ಗೆ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಕಾಪಾಡುವಲ್ಲಿ ಸಹಕರಿಸತಕ್ಕದ್ದು, ಹಾಗೂ ಯಾವುದೇ ವ್ಯಕ್ತಿಗೆ ಯಾವುದೇ ರೀತಿಯ ಮಾಹಿತಿಯನ್ನು ನೀಡುವಂತಿಲ್ಲ. ಈ ಸಂಬಂಧ ಯಾವುದೇ ವ್ಯಕ್ತಿಯು ನಿಯಮಗಳನ್ನು ಉಲ್ಲಂಘಿಸಿದರೆ, ಅವನಿಗೆ (ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಪ್ರಕರಣ 30) ಕಾನೂನಿನನ್ವಯ 3 ತಿಂಗಳುಗಳವರೆಗೂ ವಿಸ್ತರಿಸಬಹುದಾದ ಸೆರೆಮನೆವಾಸ ಅಥವಾ ದಂಡ ಅಥವಾ ಎರಡರಿಂದಲೂ ಶಿಕ್ಷೆಗೊಳಪಡುತ್ತಾರೆ.

16.2 ಮತಗಳ ಎಣಿಕೆಯು ಪ್ರಾರಂಭವಾಗುವುದಕ್ಕಿಂತಲೂ ಮುಂಚೆ, ರಿಟರ್ನಿಂಗ್ ಅಧಿಕಾರಿಯು ಮೇಲೆ ತಿಳಿಸಿದ ಸೆಕ್ಷನ್ 30ರಲ್ಲಿರುವ ಅವಕಾಶಗಳನ್ನು ಅಲ್ಲಿ ಹಾಜರಿರುವ ಪ್ರತಿಯೊಬ್ಬರ ಮಾಹಿತಿಗಾಗಿ ಮತ್ತು ಅವರುಗಳ ಅಂಗೀಕಾರಕ್ಕಾಗಿ ಓದಿ ವಿವರಿಸುವರು.

**17. ಎಣಿಕೆ ಸಿಬ್ಬಂದಿಗಳ ರ‍್ಯಾಂಡಮ್ ಆಯ್ಕೆ.**

17.1 ಎಣಿಕೆ ಮೇಲ್ವಿಚಾರಕರು ಹಾಗೂ ಎಣಿಕೆ ಸಹಾಯಕರ ನೇಮಕಾತಿಯನ್ನು ರ‍್ಯಾಂಡಮ್ ಆಗಿ ಮಾಡಬೇಕಿದ್ದು, ಕೇವಲ ಮತ ಎಣಿಕೆ ದಿನದಂದು ಎಣಿಕೆ ಕೇಂದ್ರಕ್ಕೆ ಬಂದಾಗ ಮಾತ್ರ ಎಣಿಕೆ ಸಿಬ್ಬಂದಿಗೆ, ಅವರಿಗೆ ನೀಡಲಾದ ವಾರ್ಡ್ ಸಂಖ್ಯೆ ಹಾಗೂ ಟೇಬಲ್ಲುಗಳ ಸಂಖ್ಯೆ ಬಗ್ಗೆ ತಿಳಿಯುವಂತಿರುತ್ತದೆ.

17.2 ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಬ್ಬ ಎಣಿಕೆ ಸಿಬ್ಬಂದಿಗೆ ಭಾವಚಿತ್ರವುಳ್ಳ ಗುರುತಿನ ಚೀಟಿಯನ್ನು ನೀಡತಕ್ಕದ್ದು. ಎಣಿಕೆಯ ಉದ್ದೇಶಕ್ಕಾಗಿ ಅವರು ತರಬೇತಿ ಪಡೆದ ಸಿಬ್ಬಂದಿಯ ಗುಂಪನ್ನು (ಕಾಯ್ದಿಟ್ಟ

ಸಿಬ್ಬಂದಿಯ ಗುಂಪು) ನೇಮಿಸತಕ್ಕದ್ದು. ಮತಗಳ ಎಣಿಕೆಯ ದಿನದಂದು ಎಣಿಕೆ ಸಿಬ್ಬಂದಿಗಳಿಗೆ ಎಣಿಕೆ ಕೇಂದ್ರವನ್ನು ಬೆಳಿಗ್ಗೆ 6–00 ಗಂಟೆಗೆ ತಲುಪುವಂತೆ ನಿರ್ದೇಶಿಸುವುದು.

17.3 ಎಣಿಕೆಯ ದಿನದಂದು ಬೆಳಿಗ್ಗೆ 5–00 ಗಂಟೆಗೆ ವೀಕ್ಷಕರು (Observer) ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ರ್‍ಯಾಂಡಮ್ ಆಯ್ಕೆ ಮಾಡಲು ಒಂದು ಕಡೆ ಸೇರುತ್ತಾರೆ. ಈ ಪ್ರಕ್ರಿಯೆಯನ್ನು NIC ಕೇಂದ್ರದಲ್ಲಾಗಲಿ, ಎಣಿಕೆ ಕೇಂದ್ರದಲ್ಲಾಗಲಿ ಅಥವಾ ಇತರೆ ಕಛೇರಿಯಲ್ಲಾಗಲಿ, ಎಲ್ಲಿ ಇದನ್ನು ನಡೆಸಲು ಅನುಕೂಲವಾಗಿರುತ್ತದೆಯೋ ಅಂತಹ ಸ್ಥಳದಲ್ಲಿ ನಡೆಸುವರು.

17.4 ರ್‍ಯಾಂಡಮ್ ಆಯ್ಕೆಯನ್ನು ಕೈಯಿಂದ ಅಥವಾ ಗಣಕಯಂತ್ರವನ್ನುಪಯೋಗಿಸಿ ಮಾಡತಕ್ಕದ್ದು. ಕೈಯಿಂದ ಮಾಡತಕ್ಕ ರ್‍ಯಾಂಡಮ್ ಆಯ್ಕೆಯಲ್ಲಿ ಹಾಜರಿರುವ ಅತ್ಯಂತ ಹಿರಿಯ ವೀಕ್ಷಕರು ಲಾಟರಿಯನ್ನು ತೆಗೆಯುವ ಮೂಲಕ ಎಣಿಕೆ ಸಿಬ್ಬಂದಿಗೆ ಕ್ಷೇತ್ರ ಮತ್ತು ಟೇಬಲ್ಲಿನ ಸಂಖ್ಯೆಯನ್ನು ನೀಡುವರು. ಇದನ್ನು ಮಾಡಲು ಮೇಲೆ ಹೇಳಿದಂತೆ ಎರಡು ಬೇರೆ–ಬೇರೆ ಪಟ್ಟಿಗಳನ್ನು ತಯಾರಿಸಿ, ಅಂದರೆ ಪ್ರತಿಯೊಂದು ಟೇಬಲ್ಲಿಗೂ ಒಬ್ಬ ಎಣಿಕೆ ಮೇಲ್ವಿಚಾರಕ ಹಾಗೂ ಒಬ್ಬ ಎಣಿಕೆ ಸಹಾಯಕರನ್ನು ನೇಮಿಸಲಾಗುತ್ತದೆ. ಈ ರ್‍ಯಾಂಡಮ್ ಆಯ್ಕೆಯ ಪ್ರಕ್ರಿಯೆಯು ಸುಲಭ ಹಾಗೂ ಸುಗಮವಾಗಿ ನಡೆಯಲು ಜಿಲ್ಲಾ ಚುನಾವಣಾಧಿಕಾರಿಯು ಎಲ್ಲಾ ಸಿದ್ಧತೆಯನ್ನು ಮುಂಚಿತವಾಗಿಯೇ ಮಾಡಿರುತ್ತಾರೆ. ಈ ಸಿದ್ಧತೆಯು ಎಣಿಕೆ ಸಿಬ್ಬಂದಿಗಳಿಗೆ ನೀಡುವ ವಿಶೇಷ ಕ್ರಮ ಸಂಖ್ಯೆಗಳನ್ನುಳ್ಳ ಚೀಟಿಗಳನ್ನು ಹಾಗೂ ಕ್ಷೇತ್ರ / ಟೇಬಲ್ಲುಗಳ ಸಂಖ್ಯೆಯನ್ನುಳ್ಳ ಚೀಟಿಗಳನ್ನು ತಯಾರಿಸುವದನ್ನೂ ಒಳಗೊಂಡಿರುತ್ತದೆ.

17.5 ಈ ರ್‍ಯಾಂಡಮ್ ಆಯ್ಕೆಯ ಪ್ರಕ್ರಿಯೆಯು ಸುಲಭ ಹಾಗೂ ಸುಗಮವಾಗಿ ನಡೆಯಲು ಜಿಲ್ಲಾ ಚುನಾವಣಾಧಿಕಾರಿಯು ಎಲ್ಲಾ ಸಿದ್ಧತೆಯನ್ನು ಮುಂಚಿತವಾಗಿಯೇ ಮಾಡಿಕೊಂಡಿರುತ್ತಾರೆ.

17.6 ಜಿಲ್ಲಾ ಚುನಾವಣಾಧಿಕಾರಿಯು ವೀಕ್ಷಕರಿಂದ ಸಮ್ಮತಿ ಪಡೆದು, ಮೇಲೆ ತಿಳಿಸಿದ ರ್‍ಯಾಂಡಮ್ ಆಯ್ಕೆಯನ್ನು ಗಣಕ ಯಂತ್ರವನ್ನುಪಯೋಗಿಸಿ ಸಹ ಮಾಡಬಹುದಾಗಿರುತ್ತದೆ. ವೀಕ್ಷಕರು ಈ ಪ್ರಕ್ರಿಯೆಯು ಎಲ್ಲಾ ದೋಷಗಳಿಂದ ಮುಕ್ತವಾಗಿದ್ದು, ರ್‍ಯಾಂಡಮ್ ಕ್ರಮದಲ್ಲೇ ಸರಿಯಾದ ಫಲಿತಾಂಶ ನೀಡುತ್ತದೆ ಎಂದು ತನ್ನನ್ನು ತಾನು ಖಾತ್ರಿಪಡಿಸಿಕೊಳ್ಳುವರು.

17.7 ದಾಖಲೆಯ ಸಲುವಾಗಿ ರ್‍ಯಾಂಡಮ್ ಆಯ್ಕೆ ಪ್ರಕ್ರಿಯೆಯನ್ನು ಜಿಲ್ಲಾ ಚುನಾವಣಾಧಿಕಾರಿಯು ವಿಡಿಯೋ ಚಿತ್ರೀಕರಣ ಮಾಡಿಸುವರು.

17.8 ರ್‍ಯಾಂಡಮ್ ಆಯ್ಕೆಯ ಪ್ರಕ್ರಿಯೆಯು ಮುಗಿದ ನಂತರ, ಜಿಲ್ಲಾ ಚುನಾವಣಾಧಿಕಾರಿ ಹಾಗೂ ವೀಕ್ಷಕರಿಂದ ಸಹಿ ಮಾಡಲ್ಪಟ್ಟ ಕ್ಷೇತ್ರವಾರು ನೇಮಕಾತಿ ಪಟ್ಟಿಯನ್ನು ವೀಕ್ಷಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಎಣಿಕೆ ಕೇಂದ್ರಕ್ಕೆ ಸರಿಯಾದ ಸಮಯಕ್ಕೆ ತಂದು ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಗೆ ಮತ್ತು ನಿಯಂತ್ರಣಾ ಕೊಠಡಿ (Control Room) ಸಿಬ್ಬಂದಿಗೆ ಬೆಳಿಗ್ಗೆ 6–00 ಗಂಟೆಯ ಒಳಗಾಗಿ ನೀಡುವರು.

17.9 ರ್‍ಯಾಂಡಮ್ ಆಯ್ಕೆಯ ಎಲ್ಲಾ ಪ್ರಕ್ರಿಯೆಯು ಬೆಳಿಗ್ಗೆ 6–00 ಗಂಟೆಗಳ ಒಳಗಾಗಿ ಮುಗಿಯತಕ್ಕದ್ದು, ಇದರಿಂದಾಗಿ ಎಣಿಕೆ ಪ್ರಕ್ರಿಯೆಯು ಪ್ರಾರಂಭವಾಗುವ ಸಮಯಕ್ಕಿಂತ ಮುಂಚಿತವಾಗಿ ಎಣಿಕೆ ಸಿಬ್ಬಂದಿಯು ಅವರಿಗೆ ವಹಿಸಲಾದ ವಾರ್ಡಿನ ಟೇಬಲಿನಲ್ಲಿ ಆಸೀನರಾಗಲು ಅನುಕೂಲವಾಗುತ್ತದೆ.

17.10 ಯಾವ ಸಿಬ್ಬಂದಿಗೆ ಯಾವುದೇ ಕ್ಷೇತ್ರ/ ಟೇಬಲ್ಲನ್ನು ನೀಡಲಾಗಿರುವುದಿಲ್ಲವೋ ಅವರೆಲ್ಲರೂ ಕಾಯ್ದಿಟ್ಟ ಸಿಬ್ಬಂದಿ ಗುಂಪಿಗೆ ಸೇರುತ್ತಾರೆ.

17.11 ಸಾಮಾನ್ಯವಾಗಿ ಎಣಿಕೆ ಪ್ರಕ್ರಿಯೆಯು 6 ರಿಂದ 8 ಗಂಟೆಗಳನ್ನು ಮೀರುವುದಿಲ್ಲವಾದ್ದರಿಂದ ಸಿಬ್ಬಂದಿಗಳನ್ನು ಬದಲಿಸಲಾಗುವುದಿಲ್ಲ. ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಸಿಬ್ಬಂದಿಯನ್ನು ಬದಲಿಸುವ ಸ್ವತಂತ್ರ್ಯವು ಜಿಲ್ಲಾ ಚುನಾವಣಾಧಿಕಾರಿಗಳಿಗಿರುತ್ತದೆ, ಆದರೆ ಈ ಬದಲಾವಣೆಯನ್ನು ಮಾಡಲು ಸಂಬಂಧಿಸಿದ ಕ್ಷೇತ್ರದ ವೀಕ್ಷಕರ ಸಹಮತಿ ಪಡೆದು, ರ್‍ಯಾಂಡಮ್ ಆಗಿಯೇ ಕಾಯ್ದಿಟ್ಟ ಸಿಬ್ಬಂದಿಯ ಗುಂಪಿನಿಂದ ಆಯ್ಕೆಮಾಡತಕ್ಕದ್ದು.

**18. ನಿರಂತರ ಮತ ಎಣಿಕೆ.**

ಮತಗಳ ಎಣಿಕೆಯು ಪ್ರಾರಂಭಗೊಂಡ ನಂತರ ಮುಗಿಯುವ ತನಕ ನಿರಂತರವಾಗಿ ನಡೆಯತಕ್ಕದ್ದು.

**19. ಅಂಚೆ ಮತಪತ್ರಗಳನ್ನು ಮೊದಲು ಎಣಿಕೆ ಮಾಡಬೇಕು.**

19.1 ಮತಗಳ ಎಣಿಕೆ ದಿನದಂದು ಮೊದಲಿಗೆ ಅಂಚೆ ಮತಪತ್ರಗಳ ಎಣಿಕೆಯನ್ನು ಪ್ರಾರಂಭಿಸಲಾಗುವುದು ನಂತರ 30 ನಿಮಿಷಗಳ ನಂತರದಲ್ಲಿ ವಿದ್ಯುನ್ಮಾನ ಮತಯಂತ್ರಗಳಲ್ಲಿನ ಮತಗಳ ಎಣಿಕೆಯನ್ನು ಪ್ರಾರಂಭಿಸುತ್ತಾರೆ.

19.2 ಅಂಚೆ ಮತಪತ್ರಗಳ ಎಣಿಕೆಗಾಗಿ ಪ್ರತ್ಯೇಕ ಟೇಬಲ್ಲು ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಅಂಚೆ ಮತಪತ್ರಗಳನ್ನು ತನ್ನ ಟೇಬಲ್ಲಿನಲ್ಲಿ ಎಣಿಸುವ ಜವಾಬ್ದಾರಿ ರಿಟರ್ನಿಂಗ್ ಅಧಿಕಾರಿಯದ್ದಾಗಿರುತ್ತದೆ. ಅಂಚೆ ಮತ ಪತ್ರಗಳ ಎಣಿಕೆ ಹಾಗೂ ವಿದ್ಯುನ್ಮಾನ ಮತಯಂತ್ರಗಳಲ್ಲಿನ ಮತಗಳ ಎಣಿಕೆಗಳೆರಡನ್ನೂ ವೀಕ್ಷಕರು ಹಾಗೂ ರಿಟರ್ನಿಂಗ್ ಅಧಿಕಾರಿಯು ಜಾಗರೂಕತೆಯಿಂದ ಗಮನಿಸತಕ್ಕದ್ದು. ಅಂಚೆ ಮತಪತ್ರಗಳ ಎಣಿಕೆಗಾಗಿಯೇ ಒಬ್ಬ ಪ್ರತ್ಯೇಕ ಎಣಿಕೆ ಏಜೆಂಟನನ್ನು ನೇಮಿಸಲು ಅಭ್ಯರ್ಥಿ/ ಅವರ ಚುನಾವಣಾ ಏಜೆಂಟರಿಗೆ ಸಲಹೆ ನೀಡಲಾಗಿದ್ದು, ಅಂತಹ ಏಜೆಂಟನು ಅಂಚೆ ಮತ ಪತ್ರಗಳ ಎಣಿಕೆ ನಡೆಯುತ್ತಿರುವ ಟೇಬಲ್ಲಿನ ಬಳಿ ಹಾಜರಿರತಕ್ಕದು.

19.3 ಪ್ರತಿಯೊಂದು ಸ್ವೀಕೃತ ಅಂಚೆ ಮತಪತ್ರವು ರಿಟರ್ನಿಂಗ್ ಅಧಿಕಾರಿಯ ಹೆಸರಿನ ವಿಳಾಸವನ್ನೊಳಗೊಂಡ ಲಕೋಟೆ–8ರಲ್ಲಿ ಫಾರಂ 14–E ಯನ್ನು ಲಕೋಟೆ(B) ಇರುತ್ತದೆ. ಮತ್ತು ಫಾರಂ 14–D ಯ ಇನ್ನೊಂದು ಲಕೋಟೆ(A) ಇರುತ್ತದೆ ಹಾಗೂ ಅದರ ಜೊತೆಯಲ್ಲಿ ಫಾರಂ 14-C ರಲ್ಲಿ ಮತದಾರನ ಮುಚ್ಚಳಿಕೆಯೂ ಇರುತ್ತದೆ.

19.4 ತಡವಾಗಿ ಅಂದರೆ ಮತ **ಎಣಿಕೆ ಪ್ರಾರಂಭಿಸಲು ನಿಗದಿಪಡಿಸಿದ ಸಮಯದ ನಂತರ ಸ್ವೀಕೃತವಾದ ಅಂಚೆ ಮತಪತ್ರವನ್ನೊಳಗೊಂಡ ಫಾರಂ 14–E ಯ ರಿಟರ್ನಿಂಗ್ ಅಧಿಕಾರಿಯು ತೆರೆಯುವಂತಿಲ್ಲ**. ಈ ಸಂಬಂಧ ಅವರು ಫಾರಂ 14–E ಯ ಲಕೋಟೆಯ ಮೇಲೆ ಸೂಕ್ತ ಷರಾವನ್ನು ದಾಖಲಿಸುತ್ತಾರೆ. ಇಂತಹ ಲಕೋಟೆಗಳಲ್ಲಿರುವ ಮತಗಳನ್ನು ಎಣಿಕೆಗೆ ತೆಗೆದುಕೊಳ್ಳಲಾಗುವುದಿಲ್ಲ. ಇಂತಹ ಎಲ್ಲಾ ಲಕೋಟೆಗಳನ್ನು ಒಂದು ಪ್ರತ್ಯೇಕ ಲಕೋಟೆಯಲ್ಲಿಟ್ಟು ಸೀಲು ಮಾಡಲಾಗುತ್ತದೆ.

19.5 ನಿಗದಿತ ಸಮಯದಲ್ಲಿ ರಿಟರ್ನಿಂಗ್ ಅಧಿಕಾರಿಯು ಸ್ವೀಕರಿಸಿದ ಫಾರಂ 14–E ಯ ಎಲ್ಲಾ ಲಕೋಟೆಗಳನ್ನು ಅವರೇ ಒಂದರ ನಂತರ ಮತ್ತೊಂದನ್ನು ತೆರೆಯತಕ್ಕದ್ದು. ಪ್ರತಿಯೊಂದು ಫಾರಂ 14–E ಯ ಲಕೋಟೆಯ ಒಳಗಡೆ ಮತದಾರನು ಫಾರಂ 14-C ರಲ್ಲಿ ನೀಡಿದ ಮುಚ್ಚಳಿಕೆಯೂ ಇರುತ್ತದೆ. ಅಂಚೆ ಮತ ಪತ್ರವನ್ನು ಒಳಗೊಂಡಿರುವ ಫಾರಂ 14–D ಯ ಲಕೋಟೆಯನ್ನು ತೆರೆಯುವುದಕ್ಕಿಂತ ಮುಂಚೆ ರಿಟರ್ನಿಂಗ್ ಅಧಿಕಾರಿಯು ಮುಚ್ಚಳಿಕೆಗಳನ್ನು (ಫಾರಂ 14-C)

ಪರೀಕ್ಷಿಸತಕ್ಕದ್ದು. ಈ ಕೆಳಗಿನ ಅಂಶಗಳ ಆಧಾರದ ಮೇಲೆ ಅವರು ಒಳಗಿನ ಲಕೋಟೆ (ಫಾರಂ 14–D)ಯನ್ನು ತೆರೆಯದೇ ತಿರಸ್ಕರಿಸ (Reject)ಬಹುದು.

(ಎ) ಫಾರಂ 14–E ಯ ಲಕೋಟೆಯಲ್ಲಿ, ಫಾರಂ 14-C ರಲ್ಲಿ ನೀಡಬೇಕಾದ ಮುಚ್ಚಳಿಕೆ ಇಲ್ಲದಿದ್ದರೆ,

(ಬಿ) ಮತದಾರನು ಮುಚ್ಚಳಿಕೆಗೆ ಸಹಿ ಮಾಡದಿದ್ದರೆ ಅಥವಾ ಅದನ್ನು ದೃಢೀಕರಿಸಬೇಕಿದ್ದ ಅಧಿಕಾರಿಯಿಂದ ದೃಢಿಕರಿಸಲ್ಪಡದಿದ್ದರೆ ಅಥವಾ ಬೇರೆ ಯಾವುದೇ ರೀತಿಯ ನ್ಯೂನತೆಯಿಂದ ಕೂಡಿದ್ದರೆ,

(ಸಿ) ಮುಚ್ಚಳಿಕೆಯ ಮೇಲಿರುವ ಮತಪತ್ರದ ಕ್ರಮಸಂಖ್ಯೆಯು, ಒಳಗಿನ ಲಕೋಟೆ ಫಾರಂ 14–D ನ ಮೇಲಿರುವ ಕ್ರಮಸಂಖ್ಯೆಯಿಂದ ಭಿನ್ನವಾಗಿದ್ದರೆ.

19.6 ಇಂತಹ ತಿರಸ್ಕೃತ ಎಲ್ಲಾ ಫಾರಂ 14–D ಲಕೋಟೆಗಳಿಗೆ ರಿಟರ್ನಿಂಗ್ ಅಧಿಕಾರಿಯು ಸೂಕ್ತ ಷರಾವನ್ನು ದಾಖಲಿಸುವರು ಹಾಗೂ ಅವುಗಳನ್ನು ಸಂಬಂಧಿಸಿದ ಮುಚ್ಚಳಿಕೆಗಳೊಂದಿಗೆ ಫಾರಂ 14–E ಯ ದೊಡ್ಡ ಲಕೋಟೆಗಳಲ್ಲಿ ಇಟ್ಟು ಅಂತಹ ಎಲ್ಲಾ ದೊಡ್ಡ ಲಕೋಟೆಗಳನ್ನು ಒಂದು ಪ್ರತ್ಯೇಕ ಲಕೋಟೆಯಲ್ಲಿರಿಸಿ ರಿಟರ್ನಿಂಗ್ ಅಧಿಕಾರಿಯು ಸೀಲು ಮಾಡುವರು ಹಾಗೂ ಲಕೋಟೆಯನ್ನು ಗುರುತಿಸುವ ಸಲುವಾಗಿ ಅದರ ಮೇಲೆ ಪೂರ್ಣ ವಿವರಗಳನ್ನು ಅಂದರೆ– ಚುನಾವಣಾ ಕ್ಷೇತ್ರದ ಹೆಸರು, ಮತ ಎಣಿಕೆಯ ದಿನಾಂಕ ಮತ್ತು ಅದು ಒಳಗೊಂಡಿರುವ ವಿಷಯದ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನಮೂದಿಸುತ್ತಾರೆ.

19.7 ನಂತರ ರಿಟರ್ನಿಂಗ್ ಅಧಿಕಾರಿಯು ಇನ್ನುಳಿದ ಫಾರಂ 14–D ಯ ಲಕೋಟೆಗಳನ್ನು ತೆರೆಯುವ ಬಗ್ಗೆ ಮುಂದುವರಿಯತಕ್ಕದ್ದು, ಅಂದರೆ– ಮೇಲೆ ಹೇಳಿದಂತೆ ತಿರಸ್ಕೃತ ಲಕೋಟೆಗಳನ್ನು ಹೊರತುಪಡಿಸಿ ಅಂಚೆ ಮತ ಪತ್ರಗಳ ರಹಸ್ಯವನ್ನು ಕಾಪಾಡುವ ನಿಟ್ಟಿನಲ್ಲಿ ರಿಟರ್ನಿಂಗ್ ಅಧಿಕಾರಿಯು ಪರಿಶೀಲಿಸಿದ ಎಲ್ಲಾ ಫಾರಂ 14-C ಗಳನ್ನು ಒಂದು ಪ್ರತ್ಯೇಕ ಲಕೋಟೆಯಲ್ಲಿಟ್ಟು ಸೀಲು ಮಾಡುವರು. ಅಂತಹ ಲಕೋಟೆಯನ್ನು ಗುರುತಿಸಲು ಅನುಕೂಲವಾಗುವಂತೆ ಅವುಗಳ ಮೇಲೆ ಸಂಬಂಧಿಸಿದ ವಿವರವನ್ನು ಬರೆದು ಈ ಮುಚ್ಚಳಿಕೆಗಳಲ್ಲಿ ಮತದಾರನ ಅಂಚೆ ಮತಪತ್ರದ ಕ್ರಮ ಸಂಖ್ಯೆಯೊಂದಿಗೆ ಅವರ ಹೆಸರೂ ಸಹ ನಮೂದಾಗಿರುವುದರಿಂದ, ಫಾರಂ 14–D ಯ ಲಕೋಟೆಯಲ್ಲಿರುವ ಅಂಚೆ ಮತಪತ್ರಗಳನ್ನು ಹೊರತೆಗೆಯುವ ಮೊದಲು ಮೇಲೆ ಹೇಳಿದ ಮುಚ್ಚಳಿಕೆಗಳನ್ನು ಪ್ರತ್ಯೇಕ ಲಕೋಟೆಯಲ್ಲಿ ಸೀಲುಮಾಡುವುದು ಅತ್ಯವಶ್ಯಕ.

19.8 ಮೇಲಿನ ಕಾರ್ಯವಿಧಾನವನ್ನು ಪೂರ್ಣಗೊಳಿಸಿದ ತರುವಾಯ, ರಿಟರ್ನಿಂಗ್ ಆಫೀಸರ್ ನಮೂನೆ 14–D ಯಲ್ಲಿರುವ ಲಕೋಟೆಗಳನ್ನು ಒಂದರ ನಂತರ ಮತ್ತೊಂದರಂತೆ ತೆರೆದು, ಅದರಲ್ಲಿರುವ ಅಂಚೆ ಮತಪತ್ರಗಳನ್ನು ಹೊರ ತೆಗೆಯುತ್ತಾರೆ. ರಿಟರ್ನಿಂಗ್ ಆಫೀಸರು ಅಂತಹ ಪ್ರತಿಯೊಂದು ಮತ ಪತ್ರವನ್ನು ಪರಿಶೀಲಿಸಿ, ಅದರ ಕ್ರಮಬದ್ಧತೆಯನ್ನು ನಿರ್ಧರಿಸುತ್ತಾರೆ.

19.9 ಈ ಕೆಳಕಂಡ ಕಾರಣಗಳಿಗೆ ಅಂಚೆ ಮತಪತ್ರಗಳನ್ನು ತಿರಸ್ಕರಿಸಬಹುದಾಗಿರುತ್ತದೆ–

(ಎ) ಅದರಲ್ಲಿ ಯಾವುದೇ ಮತವನ್ನು ಚಲಾಯಿಸದಿದ್ದರೆ, ಅಥವಾ

(ಬಿ) ಒಂದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳಿಗೆ ಮತವನ್ನು ನೀಡಲಾಗಿದ್ದರೆ, ಅಥವಾ

(ಸಿ) ಅದು ಕೃತಕ/ ಖೋಟಾ (Spurious) ಮತಪತ್ರವಾಗಿದ್ದರೆ, ಅಥವಾ

(ಡಿ) ಅದನ್ನು ಕ್ರಮಬದ್ಧ ಮತಪತ್ರ ಎಂದು ಗುರುತಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಹಾನಿಯುಂಟಾಗಿದ್ದರೆ, ಅಥವಾ

(ಇ) ರಿಟರ್ನಿಂಗ್ ಅಧಿಕಾರಿಯು ಮತದಾರನಿಗೆ ಕಳುಹಿಸಿದ ಲಕೋಟೆಯಲ್ಲಿ ಹಿಂದಿರುಗಿಸಲ್ಪಡದಿದ್ದರೆ, ಅಥವಾ

(ಎಫ್) ಯಾವ ಅಭ್ಯರ್ಥಿಗೆ ಮತ ನೀಡಲಾಗಿದೆ ಎಂಬುದರ ಬಗ್ಗೆ ಗೊಂದಲವಿದ್ದರೆ, ಅಥವಾ

(ಜಿ) ಮತದಾರನು ಯಾರೆಂಬುದು ಗುರುತಿಸಬಹುದಾದ ಯಾವುದೇ ಚಿನ್ಹೆ ಅಥವಾ ಬರವಣಿಗೆ ಇದ್ದರೆ.

19.10 ಕಾನೂನಿನನ್ವಯ ಅಂಚೆ ಮತಪತ್ರದ ಮೇಲೆ ಮತದಾರನು ತನ್ನ ಮತವನ್ನು ಗುರುತು ಮಾಡಲು ಯಾವುದೇ ನಿಶ್ಚಿತ ಚಿನ್ಹೆಯನ್ನು ನೀಡಿಲ್ಲ. ಯಾವುದೇ ಅನುಮಾನಗಳಿಗೆ ಆಸ್ಪದ ನೀಡದಂತೆ ಮತದಾರನು ಒಬ್ಬ ಅಭ್ಯರ್ಥಿಯ ಹೆಸರಿನ ಮುಂದೆ ಸೂಚಿಸಿರುವ ಯಾವುದೇ ರೀತಿಯ ಚಿನ್ಹೆಯನ್ನೂ ಒಪ್ಪಬಹುದಾಗಿರುತ್ತದೆ. ಹಾಗಾಗಿ ಒಬ್ಬ ಅಭ್ಯರ್ಥಿಯ ಹೆಸರಿನ ಮುಂದೆ ಮತ ಸೂಚಿಸಲು ಕೊಟ್ಟಿರುವ ಜಾಗದಲ್ಲಿ ಎಲ್ಲಾದರೂ ಮಾಡಿದ ಚಿನ್ಹೆಯನ್ನು ಆ ಅಭ್ಯರ್ಥಿಯ ಪರವಾದ ಮತವೆಂದು ಅಂಗೀಕರಿಸಲಾಗುತ್ತದೆ. ಮತದಾರನು ಮಾಡಿರುವ ಚಿನ್ಹೆಯು ಅಸ್ಪಷ್ಟವಾಗಿದ್ದಲ್ಲಿ (Indistinct) ಅಥವಾ ಒಬ್ಬ ಅಭ್ಯರ್ಥಿಗೆ ಒಂದಕ್ಕಿಂತ ಹೆಚ್ಚಿನ ಬಾರಿ ಚಿನ್ಹೆ ಮಾಡಿರುವನೆಂಬ ಕಾರಣಕ್ಕಾಗಿ ಅಂಚೆ ಮತಪತ್ರದ ಮೇಲೆ ನೀಡಿದ ಮತವನ್ನು ತಿರಸ್ಕರಿಸಲಾಗುವುದಿಲ್ಲ.

19.11 ನಂತರ ಅಂಗೀಕೃತ ಮತಗಳನ್ನು ಎಣಿಸಲಾಗುತ್ತದೆ ಹಾಗೂ ಪ್ರತಿಯೊಬ್ಬ ಅಭ್ಯರ್ಥಿಗೆ ನೀಡಲಾದ ಮತಗಳನ್ನೂ ಅವರವರ ಖಾತೆಗೆ ಸೇರಿಸಲಾಗುತ್ತದೆ. ಪ್ರತಿಯೊಬ್ಬ ಅಭ್ಯರ್ಥಿಗಾಗಿ ಸ್ವೀಕೃತವಾದ ಒಟ್ಟು ಅಂಚೆ ಮತಗಳನ್ನು ಎಣಿಕೆ ಮಾಡಿ, ಪ್ರಪತ್ರ – 17B(EVM)ರ ಫಲಿತಾಂಶದ ಹಾಳೆಯಲ್ಲಿ ದಾಖಲಿಸುವರು. ಹಾಗೂ ಅಭ್ಯರ್ಥಿಗಳ ಚುನಾವಣಾ ಏಜೆಂಟರ/ ಎಣಿಕೆ ಏಜೆಂಟರ ಮಾಹಿತಿಗಾಗಿ ಘೋಷಣೆ ಮಾಡಿ ಹೇಳಲಾಗುವುದು.

19.12 ನಂತರ ಅಂಗೀಕೃತ ಹಾಗೂ ತಿರಸ್ಕೃತ ಅಂಚೆ ಮತಪತ್ರಗಳನ್ನು ಬೇರೆ–ಬೇರೆಯಾಗಿ ಕಂತೆ (Bundle) ಕಟ್ಟಿ ಒಂದೇ ಲಕೋಟೆಯಲ್ಲಿ ಎರಡನ್ನೂ ಜೊತೆಯಾಗಿ ಸೇರಿಸಿ ರಿಟರ್ನಿಂಗ್ ಅಧಿಕಾರಿಯ ಮೊಹರಿನಿಂದ ದೃಢಪಡಿಸುವರು ಹಾಗೂ ಒಂದು ವೇಳೆ ಅಭ್ಯರ್ಥಿಗಳು ಅವರ ಚುನಾವಣಾ ಏಜೆಂಟರು ಅಥವಾ ಎಣಿಕಾ ಏಜೆಂಟರು ಇಚ್ಚಿಸಿದಲ್ಲಿ ಮೊಹರುಗಳನ್ನು (ಒಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ಇಬ್ಬರಿಗೆ ಮೀರದಂತೆ) ಹಾಕಲು ಅನುಮತಿಸತಕ್ಕದ್ದು.

**19.13 ಯಾವುದೇ ಸಂದರ್ಭದಲ್ಲಿ, ಅಂಚೆ ಮತಪತ್ರಗಳ ಎಣಿಕೆ ಅಂತಿಮಗೊಳ್ಳುವತನಕ, ವಿದ್ಯುನ್ಮಾನ ಮತಯಂತ್ರದ ಮತ ಎಣಿಕೆಯ ಎಲ್ಲಾ ಸುತ್ತಿನ ಫಲಿತಾಂಶಗಳನ್ನು ಘೋಷಿಸುವಂತಿಲ್ಲ.**

19.14 ಒಂದು ವೇಳೆ ಗೆಲುವನ್ನು ಅಂಚೆ ಮತಪತ್ರಗಳ ಎಣಿಕೆಯ ಆಧಾರದ ಮೇಲೆ ನಿರ್ಧರಿಸಬೇಕಿದ್ದರೆ, ಅಂತಹ ಸಂದರ್ಭದಲ್ಲಿ ಅಂಚೆ ಮತಪತ್ರಗಳ ಎಣಿಕೆಯನ್ನು ಅವಶ್ಯವಾಗಿ ಪುನ: ಪ್ರಮಾಣೀಕರಿಸಬೇಕಿರುತ್ತದೆ. ವೀಕ್ಷಕರು ಹಾಗೂ ರಿಟರ್ನಿಂಗ್ ಅಧಿಕಾರಿಗಳ ಸಮ್ಮುಖದಲ್ಲಿ, ತಿರಸ್ಕೃತ ಹಾಗೂ ಅಂಗೀಕೃತ ಅಂಚೆ ಮತಪತ್ರಗಳನ್ನು ಮತ್ತೊಮ್ಮೆ ಪ್ರಮಾಣೀಕರಿಸತಕ್ಕದ್ದು ಹಾಗೂ ತಾಳೆನೋಡತಕ್ಕದ್ದು. ಫಲಿತಾಂಶವನ್ನು ಅಂತಿಮಗೊಳಿಸುವುದಕ್ಕಿಂತ ಮುಂಚೆ ವೀಕ್ಷಕರು ಹಾಗೂ

ರಿಟರ್ನಿಂಗ್ ಅಧಿಕಾರಿಯು ಪುನ: ಪ್ರಮಾಣೀಕರಿಸುವಾಗ ಕಂಡುಬಂದ ಅಂಶಗಳ ಬಗ್ಗೆ ದಾಖಲಿಸಿಕೊಂಡು ಖಾತ್ರಿ ಪಡಿಸಿಕೊಳ್ಳುವುದು.

19.15 ಅಂತಹ ಪುನ: ಪ್ರಮಾಣೀಕರಿಸಿದ/ ಮತ್ತು ಎಣಿಕೆ ನಡೆಸಿದ ಸಂದರ್ಭದಲ್ಲಿ ಆ ಎಲ್ಲಾ ಪ್ರಕ್ರಿಯೆಯನ್ನು ವೀಡಿಯೋ ಚಿತ್ರೀಕರಣ ಮಾಡುವ ಮೂಲಕ ಸೆರೆಹಿಡಿಯತಕ್ಕದ್ದು ಮತ್ತು ಮತದ ರಹಸ್ಯ ಕಾಪಾಡುವಲ್ಲಿ ಯಾವುದೇ ರಾಜಿಯಿಲ್ಲದೆ, ಅಂತಹ ವೀಡಿಯೋ ಕೆಸೆಟ್/ ಸಿ.ಡಿ.ಯನ್ನು ಮುಂದಿನ ಬಳಕೆ/ ಉಲ್ಲೇಖಕ್ಕಾಗಿ ಒಂದು ಪ್ರತ್ಯೇಕ ಲಕೋಟೆಯಲ್ಲಿ ಸೀಲು ಮಾಡಲಾಗುತ್ತದೆ.

## 20. ಮತಗಟ್ಟೆಯಲ್ಲಿ ಚಲಾಯಿಸಿದ ಮತಗಳ ಎಣಿಕೆ.

20.1 ರಿಟರ್ನಿಂಗ್ ಅಧಿಕಾರಿಯು ತನ್ನ ಟೇಬಲ್ಲಿನಲ್ಲಿ ಅಂಚೆ ಮತಪತ್ರಗಳ ಎಣಿಕೆ ನಡೆಸುತ್ತಿರುವಾಗಲೇ ಮತಗಟ್ಟೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳ ಮೂಲಕ ದಾಖಲಾದ ಮತಗಳ ಎಣಿಕೆಯನ್ನು, ಮತ ಎಣಿಕೆ ಕೊಠಡಿಯಲ್ಲಿನ ಇನ್ನುಳಿದ ಟೇಬಲ್ಲುಗಳಲ್ಲಿ ನಡೆಸಲು ಸಹಾಯಕ ರಿಟರ್ನಿಂಗ್ ಅಧಿಕಾರಿ(ಗಳು) ಕೈಗೆತ್ತಿಕೊಳ್ಳಬಹುದಾಗಿರುತ್ತದೆ. ಈ ಉದ್ದೇಶಕ್ಕಾಗಿ ಮತಗಟ್ಟೆಗಳಿಂದ ಸ್ವೀಕೃತವಾದ ಮತ ಯಂತ್ರದ ಕಂಟ್ರೋಲ್ ಯೂನಿಟ್ಟುಗಳನ್ನು ವಿವಿಧ ಎಣಿಕೆ ಟೇಬಲ್ಲುಗಳಲ್ಲಿ ಹಂಚಲಾಗುತ್ತದೆ. ಮತಗಟ್ಟೆ ಸಂಖ್ಯೆ 1ರ ಕಂಟ್ರೋಲ್ ಯೂನಿಟ್‌ಅನ್ನು ಟೇಬಲ್ಲು ಸಂಖ್ಯೆ 1ಕ್ಕೆ, ಮತಗಟ್ಟೆ ಸಂಖ್ಯೆ 2ರ ಕಂಟ್ರೋಲ್ ಯೂನಿಟ್‌ಅನ್ನು ಟೇಬಲ್ಲು ಸಂಖ್ಯೆ 2ಕ್ಕೆ, ಇದೇರೀತಿ ಹಂಚಲಾಗುತ್ತದೆ. ಪ್ರತಿಯೊಂದು ಟೇಬಲ್ಲಿನಲ್ಲೂ, ಒಂದು ಸಲಕ್ಕೆ ಒಂದು ಮತಗಟ್ಟೆಯಲ್ಲಿ ಚಲಾಯಿಸಿದ ಮತಗಳ ಸಂಖ್ಯೆಯನ್ನು ದಾಖಲಿಸಿಕೊಳ್ಳುವರು. ಪ್ರಥಮ ಸುತ್ತಿನ ಮತ ಎಣಿಕೆಗೆ ಕೊಠಡಿಯಲ್ಲಿರುವ ಟೇಬಲ್ಲುಗಳ ಸಂಖ್ಯೆಯಷ್ಟೇ ಕಂಟ್ರೋಲ್ ಯೂನಿಟ್‌ಗಳನ್ನು ಮತಗಟ್ಟೆಗಳಲ್ಲಿ ಚಲಾಯಿಸಿದ ಮತಗಳನ್ನು ಎಣಿಕೆ ಮಾಡಲು ಕೈಗೆತ್ತಿಕೊಳ್ಳಲಾಗುವುದು. ಎಲ್ಲಾ ಮತಗಟ್ಟೆಗಳ ಎಣಿಕೆ ಮುಕ್ತಾಯ ಆಗುವವರೆಗೂ ಟೇಬಲ್ಲುಗಳ ಸಂಖ್ಯೆ ಹಾಗೂ ಮತಗಟ್ಟೆಗಳಿಗನುಗುಣವಾಗಿ ಮತ ಎಣಿಕೆ ಮಾಡಲು ಮತ್ತು ಮುಕ್ತಾಯಗೊಳಿಸಲು ಅವಶ್ಯವಿದ್ದಷ್ಟು ಸುತ್ತುಗಳನ್ನು ನಡೆಸತಕ್ಕದ್ದು. ಒಂದು ಸುತ್ತಿನ ಮತಗಳ ಎಣಿಕೆಯು ಅಂತ್ಯಗೊಳ್ಳದ ಹೊರತು ಮುಂದಿನ ಸುತ್ತಿನ ಎಣಿಕೆಗಾಗಿ ಕಂಟ್ರೋಲ್ ಯೂನಿಟ್‌ಗಳನ್ನು ಎಣಿಕೆ ಟೇಬಲ್ಲುಗಳಿಗೆ ತರಲಾಗುವುದಿಲ್ಲ.

20.2 ಎಣಿಕೆಯ ಸಮಯದಲ್ಲಿ ಫಲಿತಾಂಶವನ್ನು ನಿಶ್ಚಯಿಸಲು ಮತಗಟ್ಟೆಗಳಲ್ಲಿ ಮತ ಚಲಾವಣೆಗೆ ಉಪಯೋಗಿಸಲಾದ ಕಂಟ್ರೋಲ್ ಯೂನಿಟ್‌ನ ಅವಶ್ಯಕತೆ ಮಾತ್ರ ಇರುತ್ತದೆ. ಬ್ಯಾಲೆಟ್ ಯೂನಿಟ್‌ನ ಅವಶ್ಯಕತೆ ಇರುವುದಿಲ್ಲ.

20.3 ಒಂದು ಮತಗಟ್ಟೆಯಲ್ಲಿ ಬಳಕೆ ಮಾಡಲಾದ ಕಂಟ್ರೋಲ್ ಯೂನಿಟ್‌ನ ಜೊತೆಯಲ್ಲಿ ಆ ಮತಗಟ್ಟೆಗೆ ಸಂಬಂಧಿಸಿದಂತೆ ಪ್ರಪತ್ರ 17A(EVM)ನ್ನು ಕೂಡ ಮತ ಎಣಿಕೆ ಮೇಜಿಗೆ ಒದಗಿಸಲಾಗುತ್ತದೆ.

20.4 ಪ್ರತಿಯೊಂದು ಸುತ್ತಿನ ಮುಕ್ತಾಯದ ಸಮಯಕ್ಕೆ ವೀಕ್ಷಕರು ಆ ಸುತ್ತಿನಲ್ಲಿ ಎಣಿಕೆ ಮಾಡಲಾದ ಕಂಟ್ರೋಲ್ ಯೂನಿಟ್‌ಗಳಲ್ಲಿ ರ್‍ಯಾಂಡಮ್ ಆಯ್ಕೆಯ ಮೂಲಕ ಎರಡು ಕಂಟ್ರೋಲ್ ಯೂನಿಟ್‌ನ್ನು ಆರಿಸಿ ನಂತರದಲ್ಲಿ ಅವುಗಳನ್ನು ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಈ ಕಾರ್ಯಕ್ಕಾಗಿಯೇ ರ್‍ಯಾಂಡಮ್ ಆಗಿ ಆಯ್ಕೆಯಾಗಿರುವ ವಿಶೇಷ ಸಿಬ್ಬಂದಿಗೆ ನೀಡಿ ಚಲಾಯಿತ ಮತಗಳ ಬಗ್ಗೆ ಮತ ಯಂತ್ರದಲ್ಲಿರುವ ಅಂಕಿಅಂಶಗಳನ್ನು ಸ್ವತಂತ್ರವಾಗಿ ಬರೆದುಕೊಳ್ಳಲು ಸೂಚಿಸಿ, ಈ ವಿವರಗಳನ್ನು ಟೇಬಲ್ಲುವಾರು ನೀಡಿದ ಫಲಿತಾಂಶದೊಂದಿಗೆ ಹೋಲಿಕೆ ಮಾಡುವರು. ಇಂತಹ ವಿಶೇಷ ಸಿಬ್ಬಂದಿಗೆ ಟೇಬಲ್ಲುವಾರು ನೀಡಿದ ಫಲಿತಾಂಶದ ವಿವರ ತಿಳಿದಿರುವುದಿಲ್ಲ.

**21. ಕಂಟ್ರೋಲ್ ಯೂನಿಟ್‌ನ ಮೇಲೆ ತಪಾಸಣೆ ಮೊಹರುಗಳು.**

ಯಾವುದೇ ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡುವ ಮುನ್ನ, ಎಣಿಕೆ ಟೇಬಲ್ಲಿಗಳಲ್ಲಿ ಹಾಜರಿರುವ ಎಣಿಕೆ ಏಜೆಂಟರುಗಳಿಗೆ ಪೆಟ್ಟಿಗೆಗೆ ಮಾಡಲಾದ/ ಹಾಕಲಾದ ಸ್ಟ್ರಿಪ್ ಸೀಲನ್ನು, ವಿಶೇಷ ಟ್ಯಾಗನ್ನು, ಹಸಿರು ಕಾಗದದ ಸೀಲನ್ನು ಹಾಗೂ ಕಂಟ್ರೋಲ್ ಯೂನಿಟ್ಟನ್ನು ಪರಿಶೀಲಿಸಲು ಹಾಗೂ ಅಂತಹ ಸೀಲುಗಳು ಸರಿಯಾಗಿದ್ದು ಕಂಟ್ರೋಲ್ ಯೂನಿಟ್‌ಅನ್ನು ಬದಲಾಯಿಸಲಾಗಿಲ್ಲ ಎಂದು ಖಾತ್ರಿ ಪಡಿಸಿಕೊಳ್ಳಲು ಅನುವು ಮಾಡಿಕೊಡುವರು. ಒಂದು ವೇಳೆ ಯಾವುದೇ ಕಂಟ್ರೋಲ್ ಯೂನಿಟ್‌ಅನ್ನು ಬದಲಾಯಿಸಲಾಗಿದ್ದಲ್ಲಿ ಅಂತಹ ಯಂತ್ರದಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡಲಾಗುವುದಿಲ್ಲ. ಹಾಗೂ ಈ ಕುರಿತು ಸೂಕ್ತ ನಿರ್ದೇಶನ ಕೋರಿ ಆಯೋಗಕ್ಕೆ ತಿಳಿಸಲಾಗುತ್ತದೆ. ಆಯೋಗದ ನಿರ್ದೇಶನದಂತೆ ಎಣಿಕೆ ಸಂಬಂಧ ರಿಟರ್ನಿಂಗ್ ಅಧಿಕಾರಿ ಕ್ರಮ ವಹಿಸುತ್ತಾರೆ.

**22. ಕಂಟ್ರೋಲ್ ಯೂನಿಟ್ ಸಾಗಿಸುವ ಪೆಟ್ಟಿಗೆಯನ್ನು ತೆಗೆಯುವುದು.**

ಎಣಿಕೆ ಟೇಬಲ್ಲಿಗೆ ತರಲಾಗುವ ಪ್ರತಿಯೊಂದು ಕಂಟ್ರೋಲ್ ಯೂನಿಟ್ಟನ್ನು ಸಾಗಿಸುವ ಪೆಟ್ಟಿಗೆಗೆ, ಪ್ರಿಸೈಡಿಂಗ್ ಅಧಿಕಾರಿಯು ಮತಗಟ್ಟೆಯಲ್ಲಿ ಹಾಕಿರುವ ಸೀಲನ್ನು ಪರಿಶೀಲಿಸಿ ಒಂದು ವೇಳೆ ಕಂಟ್ರೋಲ್ ಯೂನಿಟ್ ಇಡುವ ಪೆಟ್ಟಿಗೆ ಮೇಲಿರುವ ಮೊಹರಿಗೆ ಧಕ್ಕೆಯಾದರೂ ಕಂಟ್ರೋಲ್ ಯೂನಿಟ್‌ನ ಮೇಲಿನ ಪೇಪರ್ ಸೀಲು ಹಾನಿಯಾಗದಿದ್ದಲ್ಲಿ ಕಂಟ್ರೋಲ್ ಯೂನಿಟ್‌ಗೆ ಧಕ್ಕೆಯಾಗಿರುವುದಿಲ್ಲ ಎಂದು ಭಾವಿಸಬಹುದಾಗಿದೆ. ನಂತರ ಅಂತಹ ಪೆಟ್ಟಿಗೆಯಿಂದ ಕಂಟ್ರೋಲ್ ಯೂನಿಟ್‌ಅನ್ನು ಹೊರತೆಗೆಯಲು ಅವಕಾಶವಿದೆ.

**23. ಕಂಟ್ರೋಲ್ ಯೂನಿಟ್‌ನ ಮೇಲಿರುವ ಮೊಹರುಗಳನ್ನು ಹಾಗೂ ಗುರುತಿನ ಚಿನ್ಹೆಗಳನ್ನು ಪರಿಶೀಲಿಸುವುದು.**

ಪ್ರತಿಯೊಂದು ಕಂಟ್ರೋಲ್ ಯೂನಿಟ್‌ಅನ್ನು ಹೊರತೆಗೆದ ನಂತರ, ಇದು ಸಂಬಂಧಿಸಿದ ಮತಗಟ್ಟೆಗೆ ನೀಡಿದ ಕಂಟ್ರೋಲ್ ಯೂನಿಟ್ಟೇ ಎಂದು ದೃಢಪಡಿಸಲು ಅದರ ಕ್ರಮ ಸಂಖ್ಯೆಯನ್ನು ಪರೀಕ್ಷಿಸಲಾಗುವುದು. ನಂತರ ಮತಗಟ್ಟೆಗೆ ಯಂತ್ರವನ್ನು ಸರಬರಾಜು ಮಾಡುವುದಕ್ಕೂ ಮುಂಚೆ ಕ್ಯಾಂಡಿಡೇಟ್ ಸೆಟ್ ಸೆಕ್ಷನ್‌ಗೆ ರಿಟರ್ನಿಂಗ್ ಅಧಿಕಾರಿಯು ಹಾಕಿರುವ ಸೀಲನ್ನು ಹಾಗೂ ಮತಗಟ್ಟೆಯಲ್ಲಿ ರಿಸಲ್ಟ್ ಸೆಕ್ಷನ್‌ಗೆ ಪ್ರಿಸೈಡಿಂಗ್ ಅಧಿಕಾರಿಯು ಹೊರ ಕವಚದ ಮೇಲೆ ಹಾಕಿರುವ ಸೀಲುಗಳನ್ನು ಪರೀಕ್ಷಿಸಲಾಗುವುದು. ಒಂದು ವೇಳೆ ಇವೆರಡರಲ್ಲಿ ಯಾವುದಾದರೂ ಒಂದು ಸೀಲು ಹಾಳಾಗಿದ್ದರೂ **ಒಳಗಿನ ಕವಚಕ್ಕೆ ಹಾಕಿರುವ ಪೇಪರ್ ಸೀಲು ಸರಿಯಾಗಿ ಇದ್ದ ಪಕ್ಷದಲ್ಲಿ ಕಂಟ್ರೋಲ್ ಯೂನಿಟ್‌ಗೆ ಧಕ್ಕೆಯಾಗಿರಲು ಸಾಧ್ಯವಿಲ್ಲ.**

**24. ಪೇಪರ್ ಸೀಲಿನ ಕ್ರಮ ಸಂಖ್ಯೆಯನ್ನು ತಾಳೆ ನೋಡುವುದು.**

24.1 ರಿಸಲ್ಟ್ ಸೆಕ್ಷನ್‌ನ ಹೊರ ಕವಚವನ್ನು ತೆರೆದರೆ, ಪ್ರಿಸೈಡಿಂಗ್ ಅಧಿಕಾರಿಯಿಂದ ಸೀಲುಮಾಡಲಾದ ಒಳಕವಚವು ಕಂಡುಬರುತ್ತದೆ. ಒಂದು ವೇಳೆ ಈ ಮೊಹರಿಗೆ ಧಕ್ಕೆಯಾಗಿದ್ದರೂ ಕಂಟ್ರೋಲ್ ಯೂನಿಟ್‌ಗೆ ಹಾಕಿದ ಪೇಪರ್ ಸೀಲಿಗೆ ಧಕ್ಕೆಯಾಗಿಲ್ಲದಿದ್ದರೆ ಕಂಟ್ರೋಲ್ ಯೂನಿಟ್‌ಗೆ ಹಾನಿಯಾಗಿರುವುದಿಲ್ಲ. ರಿಸಲ್ಟ್ ಸೆಕ್ಷನ್‌ನ ಒಳ ಕವಚದಲ್ಲಿ ಒಂದು ಹಸಿರು ಕಾಗದ ಸೀಲು ಇರುತ್ತದೆ. ಹಸಿರು ಕಾಗದ ಸೀಲುಗಳನ್ನು ರಿಸಲ್ಟ್ ಗುಂಡಿಯನ್ನು ಹೊಂದಿರುವ ಒಳವಿಭಾಗದ ಹೊರಭಾಗಕ್ಕೆ

ಎರಡೂ ಕೊನೆಗಳು ಕಾಣಿಸುವಂತೆ ಮಾಡಲಾಗಿರುತ್ತದೆ. ಹಸಿರು ಕಾಗದದ ಸೀಲಿನ ಅಂತಹ ಒಂದು ಕೊನೆಯ ಮೇಲೆ ಕ್ರಮ ಸಂಖ್ಯೆಯನ್ನು ಮುದ್ರಿಸಲಾಗಿರುತ್ತದೆ. ಅಂತಹ ಕ್ರಮಸಂಖ್ಯೆಯನ್ನು ಪ್ರಿಸ್ಯೆಡಿಂಗ್ ಆಫೀಸರನು ನೀಡಿದ ಪ್ರಪತ್ರ 17A(EVM) ರ ಭಾಗ–Iರ ಐಟಂ 9ರಲ್ಲಿ ನಮೂದಿಸಿದ ಕ್ರಮ ಸಂಖ್ಯೆಯೊಂದಿಗೆ ಪರಿಶೀಲಿಸಿ, ಅಂತಹ ಕ್ರಮಸಂಖ್ಯೆಯನ್ನು ಟೇಬಲ್ಲಿನಲ್ಲಿ ಹಾಜರಿರುವ ಎಣಿಕೆ ಏಜೆಂಟನಿಗೂ ಪರಿಶೀಲಿಸಲು ಅವಕಾಶ ನೀಡಲಾಗುವುದು ಹಾಗೂ ಅವರು ಅದು ಮತದಾನಕ್ಕಿಂತ ಮುಂಚೆ ಪ್ರಿಸ್ಯೆಡಿಂಗ್ ಅಧಿಕಾರಿಯು ಮತಗಟ್ಟೆಯಲ್ಲಿ ಹಾಕಿರುವ ಅದೇ ಹಸಿರು ಕಾಗದದ ಸೀಲೆಂದು ಖಾತ್ರಿ ಪಡಿಸಿಕೊಳ್ಳಬಹುದಾಗಿದೆ.

24.2 ಒಂದು ವೇಳೆ ಕ್ರಮ ಸಂಖ್ಯೆಯು ತಾಳೆಹೊಂದದಿದ್ದ ಪಕ್ಷದಲ್ಲಿ, ರಿಟರ್ನಿಂಗ್ ಅಧಿಕಾರಿಯು ಪ್ರಿಸ್ಯೆಡಿಂಗ್ ಅಧಿಕಾರಿಯಿಂದ ಹಿಂದಿರುಗಿಸಲ್ಪಟ್ಟ ಉಪಯೋಗಿಸದ (Unused) ಪೇಪರ್ ಸೀಲುಗಳನ್ನು ಪರಿಶೀಲಿಸಿ ಸಂದೇಹವನ್ನು ಪರಿಹರಿಸಿಕೊಳ್ಳಬಹುದು. ಒಂದುವೇಳೆ ಇದು ಕೈಬರಹದ ತಪ್ಪಿನಿಂದ ಆಗಿರುವುದೆಂದು ತಿಳಿದುಬಂದಲ್ಲಿ ಆ ವ್ಯತ್ಯಾಸವನ್ನು ಕಡೆಗಣಿಸುವುದು.

## 25. ಕಂಟ್ರೋಲ್ ಯೂನಿಟ್‌ಗಳನ್ನು ವ್ಯತ್ಯಸ್ತಗೊಳಿಸಿರುವುದು ಕಂಡುಬಂದರೆ ಅವುಗಳನ್ನು ದೂರವಿಡಬೇಕು.

ಒಂದುವೇಳೆ ರಿಟರ್ನಿಂಗ್ ಅಧಿಕಾರಿಗೆ ಯಾವುದೇ ಒಂದು ಕಂಟ್ರೋಲ್ ಯೂನಿಟ್ ಬದಲಾಯಿಸಲಾಗಿದೆ ಎಂದು ಖಾತ್ರಿಯಾದಲ್ಲಿ ಅಥವಾ ಮತಗಟ್ಟೆಗೆ ನೀಡಿದ ಕಂಟ್ರೋಲ್ ಯೂನಿಟ್ ಅದಲ್ಲ ಎಂದು ಖಾತ್ರಿಯಾದಲ್ಲಿ ಅಂತಹ ಯಂತ್ರಗಳಲ್ಲಿ ದಾಖಲಾಗಿರುವ ಮತಗಳ ಎಣಿಕೆಯನ್ನು ನಡೆಸತಕ್ಕದ್ದಲ್ಲ ಹಾಗೂ ಅವುಗಳನ್ನು ಪಕ್ಕಕ್ಕೆ ಇಡಬಹುದಾಗಿದೆ. ಈ ವಿಷಯವನ್ನು ಆಯೋಗಕ್ಕೆ ತಿಳಿಸಿ ಸೂಕ್ತ ನಿರ್ದೇಶನ ಪಡೆಯತಕ್ಕದ್ದು. ಕಾನೂನಿನನ್ವಯ ಯಾವುದೇ ಒಂದು ಮತ ಯಂತ್ರವು ಬದಲಾಯಿಸಲಾಗಿದ್ದರೆ, ಇಡೀ ಎಣಿಕೆ ಪ್ರಕ್ರಿಯೆಯನ್ನು ನಿಲ್ಲಿಸುವ ಅವಶ್ಯಕತೆ ಇಲ್ಲ. ಇನ್ನುಳಿದ ಮತಗಟ್ಟೆಗಳ ಮತ ಎಣಿಕೆ ಪ್ರಕ್ರಿಯೆಯನ್ನು ರಿಟರ್ನಿಂಗ್ ಅಧಿಕಾರಿಯು ಮುಂದುವರಿಸುವರು

## 26. ವೀಕ್ಷಕರ ಪಾತ್ರ.

26.1 ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಆಯೋಗದಿಂದ ಸಂಬಂಧಿತ ಕ್ಷೇತ್ರಗಳಿಗಾಗಿ ನಿಯೋಜಿಸಿದ ವೀಕ್ಷಕರು, ಕಾನೂನಿನ ನಿಯಮಗಳಡಿಯಲ್ಲಿ ಎಣಿಕೆ ಪ್ರಕ್ರಿಯೆಯನ್ನು ಪರಿವೀಕ್ಷಿಸುವ ವಿಶೇಷ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅವರುಗಳಿಗೆ ಚುನಾವಣಾ ಫಲಿತಾಂಶವನ್ನು ಘೋಷಿಸುವ ಮುಂಚೆ ಯಾವುದೇ ಸಮಯದಲ್ಲಾದರೂ ಎಣಿಕೆ ಪ್ರಕ್ರಿಯೆಯನ್ನು ತಡೆಯುವ/ ನಿಲ್ಲಿಸುವ ಅಧಿಕಾರವಿರುತ್ತದೆ. ಅಥವಾ ಯಾವುದೇ ತುರ್ತು ಸಂದರ್ಭದಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಫಲಿತಾಂಶವನ್ನು ಘೋಷಿಸದೇ ಇರಲು ನಿರ್ದೇಶಿಸುವ ಅಧಿಕಾರವನ್ನೂ ಹೊಂದಿರುತ್ತಾರೆ.

26.2 ಒಂದು ವೇಳೆ ವೀಕ್ಷಕರು ಪ್ರಕ್ರಿಯೆಯನ್ನು ತಡೆದದ್ದೇ ಆದಲ್ಲಿ ಅದರ ಬಗ್ಗೆ ವಿವರವಾದ ವಿವರಣೆಯನ್ನು ವೀಕ್ಷಕರು ಮತ್ತು ಸಂಬಂಧಿಸಿದ ಕ್ಷೇತ್ರದ ರಿಟರ್ನಿಂಗ್ ಅಧಿಕಾರಿಯು ಒಟ್ಟಿಗೆಯಾಗಲೀ ಅಥವಾ ಪ್ರತ್ಯೇಕವಾಗಿಯಾಗಲಿ ಸೂಕ್ತ ಆದೇಶ ಪಡೆಯಲು ಆಯೋಗಕ್ಕೆ ಕಳುಹಿಸುವರು.

**27. ಫಲಿತಾಂಶವನ್ನು ಖಚಿತಪಡಿಸುವುದು.**

27.1 ಮತಗಟ್ಟೆಗೆ ನೀಡಲಾದ ಕಂಟ್ರೋಲ್ ಯೂನಿಟ್ಟಿಗೆ ಹಾಕಿದ ಪೇಪರ್ ಸೀಲು ಸರಿಯಾಗಿರುವುದಾಗಿ, ಹಾಗೂ ಇದನ್ನು ಬದಲಾಯಿಸಲಾಗಿಲ್ಲ ಎಂದು ಖಾತ್ರಿ ಪಡಿಸಿಕೊಂಡ ನಂತರ ಅದರಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಈ ಉದ್ದೇಶಕ್ಕಾಗಿ ಎಣಿಕೆ ಮೇಲ್ವಿಚಾರಕರು ಈ ಕೆಳಗಿನ ಪ್ರಕ್ರಿಯೆಯನ್ನು ಅನುಸರಿಸುವರು:–

(i) ಕಂಟ್ರೋಲ್ ಯೂನಿಟ್‌ನ ಹಿಂಭಾಗದಲ್ಲಿ ನೀಡಲಾಗಿರುವ ಪವರ್ (Power) ಗುಂಡಿಯನ್ನು **'ON'** ಸ್ಥಾನಕ್ಕೆ ತರುವರು. ಆಗ ಕಂಟ್ರೋಲ್ ಯೂನಿಟ್ಟಿನ ಡಿಸ್‌ಪ್ಲೇ ವಿಭಾಗವು ಹಸಿರು ಬಣ್ಣದಿಂದ ಬೆಳಗುತ್ತದೆ.

(ii) ಫಲಿತಾಂಶ ವಿಭಾಗದ ಒಳ ಪರದೆಗೆ ಸೇರಿದ 'Result' ಗುಂಡಿಯನ್ನು ಮುಚ್ಚುವಂತೆ ಮಾಡಿರುವ ಪೇಪರ್ ಸೀಲಿಗೆ ರಂಧ್ರ ಮಾಡುವರು.

(iii) 'Result' ಗುಂಡಿಯನ್ನು ಒತ್ತಿದ ತಕ್ಷಣ, ಕಂಟ್ರೋಲ್ ಯೂನಿಟ್ಟಿನ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ದಾಖಲಾಗಿರುವ ಒಟ್ಟು ಮತಗಳು ಸ್ವಯಂ ಪ್ರದರ್ಶಿತಗೊಳ್ಳುತ್ತವೆ. ಒಂದುವೇಳೆ ಒಂದು ಮತಗಟ್ಟೆಯಲ್ಲಿ ಒಂಭತ್ತು ಚುನಾವಣಾ ಅಭ್ಯರ್ಥಿ ಹಾಗೂ NOTA ಇದ್ದು, ಚಲಾಯಿತವಾದ ಒಟ್ಟು ಮತಗಳು 54 ಆಗಿದ್ದಲ್ಲಿ, ಪ್ರತಿಯೊಬ್ಬ ಅಭ್ಯರ್ಥಿಗೆ ದಾಖಲಾದ ಮತಗಳನ್ನು ಡಿಸ್‌ಪ್ಲೇ ಪ್ಯಾನಲ್ ಈ ಕೆಳಗಿನಂತೆ ತೋರಿಸುತ್ತದೆ :–

| Display | |
|---|---|
| COMPUTING RESULT | |
| POLL RESULT PDT 16-01-07 | (PDT – ಮತದಾನದ ದಿನಾಂಕ) |
| PST 09-50-20 PET 15-32-10 | ( PST - ಮತದಾನ ಪ್ರಾರಂಭವಾದ ಸಮಯ) (PET - ಮತದಾನ ಮುಕ್ತಾಯದ ಸಮಯ) |
| SL NO. H00003 | ಕಂಟ್ರೋಲ್ ಯುನಿಟ್‌ನ ಕ್ರಮಸಂಖ್ಯೆ |
| CANDIDATE 10 | ಉಮೇದುವಾರರ ಸಂಖ್ಯೆ 9 ಅಭ್ಯರ್ಥಿಗಳು + NOTA |
| TOTAL POLLED VOTES-54 | ಚಲಾವಣೆಯಾದ ಮತಗಳ ಸಂಖ್ಯೆ–54 |
| CANDIDATE - 01 VOTES – 6 | |
| CANDIDATE - 02 VOTES – 6 | |
| CANDIDATE - 03 VOTES – 06 | |

| |
|---|
| CANDIDATE - 04<br>VOTES – 6 |

| |
|---|
| CANDIDATE - 05<br>VOTES - 6 |

| |
|---|
| CANDIDATE - 06<br>VOTES - 6 |

| |
|---|
| CANDIDATE - 07<br>VOTES - 6 |

| |
|---|
| CANDIDATE - 08<br>VOTES - 6 |

| |
|---|
| CANDIDATE - 09<br>VOTES - 6 |

| |
|---|
| CANDIDATE - 10<br>VOTES - 0 |

| | |
|---|---|
| END | ಮುಕ್ತಾಯ |

(ಇದು ಒಂದು ಉದಾಹರಣೆ ಮಾತ್ರ)

(iv) ಮೇಲೆ ತಿಳಿಸಿದಂತೆ ಪ್ರತಿಯೊಬ್ಬ ಅಭ್ಯರ್ಥಿವಾರು ಕ್ರಮವಾಗಿ ತೋರಲ್ಪಟ್ಟ ಫಲಿತಾಂಶವನ್ನು ಎಣಿಕೆ ಮೇಲ್ವಿಚಾರಕರು, ಪ್ರಪತ್ರ–17A(EVM)ರ ಭಾಗ–II ಎಣಿಕೆಯ ಫಲಿತಾಂಶ ಎಂಬಲ್ಲಿ ದಾಖಲಿಸಿ ಕೊಳ್ಳುವರು.

27.2 ಅವಶ್ಯಕತೆ ಇದ್ದಲ್ಲಿ 'Result' ಗುಂಡಿಯನ್ನು ಮತ್ತೊಮ್ಮೆ ಒತ್ತಿ, ಅಭ್ಯರ್ಥಿ ಮತ್ತು / ಅಥವಾ ಅವರ ಏಜೆಂಟರು ಅಂತಹ ಫಲಿತಾಂಶವನ್ನು ದಾಖಲಿಸಿಕೊಳ್ಳಲು ಅನುವು ಮಾಡಿಕೊಡುವರು.

27.3 ಫಲಿತಾಂಶವನ್ನು ದಾಖಲಿಸಿಕೊಂಡ ನಂತರ, ಫಲಿತಾಂಶ ವಿಭಾಗದ ಕವಚವನ್ನು ಮುಚ್ಚಿ ಕಂಟ್ರೋಲ್ ಯೂನಿಟ್‌ಅನ್ನು ಸ್ವಿಚ್ ಆಫ್ (Switch Off) ಮಾಡುವರು.

**28. ಪ್ರಪತ್ರ 17A (EVM)ರ, ಮತ ಎಣಿಕೆಯ ಫಲಿತಾಂಶ ಭಾಗ–II ನ್ನು ಪೂರ್ಣಗೊಳಿಸುವುದು.**

28.1 ಮೇಲೆ ತಿಳಿಸಿದಂತೆ ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಒಬ್ಬೊಬ್ಬ ಅಭ್ಯರ್ಥಿಗೂ ತೋರಲ್ಪಟ್ಟ ಫಲಿತಾಂಶವನ್ನು ಎಣಿಕೆ ಮೇಲ್ವಿಚಾರಕರು ಪ್ರಪತ್ರ 17A(EVM)ರ ಭಾಗ–II, ಎಣಿಕೆ ಫಲಿತಾಂಶ ಎಂಬಲ್ಲಿ ದಾಖಲಿಸಿಕೊಂಡು ನಂತರ ಪ್ರಪತ್ರ 17A(EVM)ರ ಭಾಗ–IIರಲ್ಲಿನ ಒಟ್ಟು ಮತಗಳ ಸಂಖ್ಯೆಯು ಭಾಗ–I ರ ಐಟಂ 5 ರೊಂದಿಗೆ ತಾಳೆಯಾಗುತ್ತದೆಯೇ ಅಥವಾ ಇವೆರಡರ ಒಟ್ಟು ಮೊತ್ತದಲ್ಲಿ ಯಾವುದೇ ವ್ಯತ್ಯಾಸವಿದೆಯೇ ಎಂಬುದನ್ನು ಗಮನಿಸುವರು.

28.2 ಒಂದು ವೇಳೆ ಅಂತಹ ಯಾವುದೇ ವ್ಯತ್ಯಾಸವನ್ನು ನೀವು ಗಮನಿಸಿದಲ್ಲಿ, ಈ ಕುರಿತು ಕಾನೂನಿನನ್ವಯ ಸೂಕ್ತ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುವಂತೆ, ರಿಟರ್ನಿಂಗ್ ಅಧಿಕಾರಿಯ ಗಮನಕ್ಕೆ ತರತಕ್ಕದ್ದು. ರಿಟರ್ನಿಂಗ್ ಅಧಿಕಾರಿಯೊಂದಿಗೆ ಈ ವಿಷಯದ ಕುರಿತು ಮುಂದಿನ ಕ್ರಮದ ಬಗ್ಗೆ ತಿಳಿದುಕೊಳ್ಳಲು

ಆಸಕ್ತಿ ತೋರಬಹುದಾದ್ದರಿಂದ, ನೀವು ಅಂತಹ ವಿಷಯವನ್ನು ನಿಮ್ಮ ಅಭ್ಯರ್ಥಿಗೆ ಅಥವಾ ಅವರ ಚುನಾವಣಾ ಏಜೆಂಟನ ಗಮನಕ್ಕೆ ತರತಕ್ಕದ್ದು.

28.3 ಪ್ರಪತ್ರ 17A(EVM)ರ ಭಾಗ–IIನ್ನು ಪೂರ್ಣಗೊಳಿಸಿದ ನಂತರ ಎಣಿಕೆ ಮೇಲ್ವಿಚಾರಕರು ಅದಕ್ಕೆ ಸಹಿ ಹಾಕಿ ಅವನು ಟೇಬಲ್ಲಿನಲ್ಲಿ ಹಾಜರಿರುವ ಅಭ್ಯರ್ಥಿ ಅಥವಾ ಅವರ ಏಜೆಂಟರ ಸಹಿಯನ್ನು ಪಡೆಯುವರು.

28.4 ಪ್ರಪತ್ರ 17A(EVM)ರ ಪ್ರತಿಯನ್ನು ಅನುಬಂಧ–III ರಲ್ಲಿ ನೀಡಲಾಗಿದೆ.

28.5 ಚುನಾವಣಾ ಮೇಲ್ವಿಚಾರಕನು ಪ್ರಪತ್ರ 17A(EVM)ರ ಭಾಗ–IIನ್ನು ಪೂರ್ಣಗೊಳಿಸಿ ಸಹಿಮಾಡಿ ಅಭ್ಯರ್ಥಿ ಅಥವಾ ಅವರ ಏಜೆಂಟರ ಸಹಿ ಪಡೆದ ನಂತರ ಅಂತಹ ಫಾರಂನ್ನು ರಿಟರ್ನಿಂಗ್ ಅಧಿಕಾರಿಗೆ ನೀಡುವರು. ಅಂತಹ ಫಾರಂ ಪೂರ್ಣ ಮಾಹಿತಿಯನ್ನೊಳಗೊಂಡಿದೆ ಎಂದು ಖಾತ್ರಿ ಪಡಿಸಿಕೊಂಡ ನಂತರ ರಿಟರ್ನಿಂಗ್ ಅಧಿಕಾರಿಯು ಅದಕ್ಕೆ ಮೇಲು ರುಜು ಮಾಡುವರು. ನಂತರ ರಿಟರ್ನಿಂಗ್ ಅಧಿಕಾರಿಯಿಂದ ಮೇಲುರುಜು ಮಾಡಲ್ಪಟ್ಟ ಅಂತಹ ಫಾರಂನ್ನು, ಪ್ರಪತ್ರ 17B(EVM)ರ ರಲ್ಲಿ ಅಂತಿಮ ಫಲಿತಾಂಶ ಪಟ್ಟಿಯನ್ನು ತಯಾರಿಸುತ್ತಿರುವಂತಹ ಅಧಿಕಾರಿಗೆ ನೀಡಲಾಗುತ್ತದೆ.

**29. ಅಂತಿಮ ಫಲಿತಾಂಶ ಪಟ್ಟಿಯನ್ನು ಸಿದ್ಧಪಡಿಸುವುದು.**

29.1 ಅಂತಿಮ ಫಲಿತಾಂಶವನ್ನು ಸಂಕಲನಮಾಡಿ ಪ್ರಪತ್ರ 17B(EVM) ಅನುಬಂಧ–IV ರಲ್ಲಿ ಅಂತಿಮ ಫಲಿತಾಂಶ ಪಟ್ಟಿಯನ್ನು ತಯಾರಿಸಲು ನೇಮಿಸಲಾಗಿರುವ ಅಧಿಕಾರಿಯು ಪ್ರಪತ್ರ 17A(EVM)ರ ಭಾಗ–II ಎಣಿಕೆಯ ಫಲಿತಾಂಶದಲ್ಲಿ ಮತಗಟ್ಟೆವಾರು ನಮೂದಿಸಿರುವ ದಾಖಲೆಗಳನ್ವಯ, ಪ್ರತಿಯೊಬ್ಬ ಅಭ್ಯರ್ಥಿಗೂ ಚಲಾಯಿತ ಮತಗಳನ್ನು ಮತಗಟ್ಟೆವಾರಾಗಿ ದಾಖಲಿಸುವರು. ಒಂದು ವೇಳೆ ಯಾವುದೇ ಮತಗಟ್ಟೆಯಲ್ಲಿ ಟೆಂಡರ್ ಮತವನ್ನು ಚಲಾಯಿಸಿದ್ದಲ್ಲಿ, ಅಂತಹವನ್ನೂ ಸಹ ಪ್ರಪತ್ರ 17B(EVM) ರಲ್ಲಿ ಸಂಬಂಧಿಸಿದ ಮತಗಟ್ಟೆಯ ಮುಂದೆ ದಾಖಲಿಸುವರು.

29.2 ಅಂತಹ ಪ್ರಪತ್ರ 17B(EVM) ರಲ್ಲಿ ದಾಖಲಿಸಿರುವ ಪ್ರತಿಯೊಂದು ಮತಗಟ್ಟೆಗೆ ಸಂಬಂಧಿಸಿದ ದಾಖಲೆಗಳನ್ನು, ಅಭ್ಯರ್ಥಿ ಹಾಗೂ ಅವರ ಏಜೆಂಟರು ದಾಖಲಿಸಿಕೊಳ್ಳಲು/ ಬರೆದುಕೊಳ್ಳಲು ಅನುವಾಗುವಂತೆ ಘೋಷಿಸಲಾಗುವುದು. ಅಥವಾ ಅದರ ಬದಲಿಗೆ ಅಂತಹ ಪ್ರಪತ್ರ 17B(EVM) ರಲ್ಲಿ ಮಾಡಿರುವ ದಾಖಲೆಗಳನ್ನು ಕಪ್ಪು ಹಲಗೆಯ (Black Board) ಮೇಲೆಯೂ ಬರೆಸಬಹುದು. ಇದರಿಂದ ನೀವು ಇನ್ನುಳಿದ ಮತಗಟ್ಟೆಗಳ ಮತ ಎಣಿಕೆಯ ಪ್ರಕ್ರಿಯೆಯಲ್ಲಿ ಮುಂದುವರಿಯಲು ಅನುಕೂಲವಾಗುತ್ತದೆ.

**30. ಮತಗಳ ಮರು ಎಣಿಕೆ.**

30.1 ಸಾಮಾನ್ಯವಾಗಿ, ಮತಯಂತ್ರಗಳಲ್ಲಿ ದಾಖಲಾದ ಮತಗಳ ಮರು ಎಣಿಕೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮತ ಯಂತ್ರಗಳಲ್ಲಿ ದಾಖಲಾದ ಪ್ರತಿಯೊಂದು ಮತವೂ ಮಾನ್ಯತೆ ಪಡೆದ ಮತವಾಗಿದ್ದು ಅದರ ಸಿಂಧುತ್ವದ ಬಗ್ಗೆ ಅಥವಾ ಅನ್ಯಥಾ ಯಾವುದೇ ವಿವಾದ ಉಂಟಾಗುವುದಿಲ್ಲ. ಬಹುತೇಕ ಕೆಲವು ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಮಾಹಿತಿಯನ್ನು ಕಂಟ್ರೋಲ್ ಯೂನಿಟ್‌ನಲ್ಲಿ ಪ್ರದರ್ಶಿಸಿದಾಗ ನಿರ್ದಿಷ್ಟ ಮತಗಟ್ಟೆಯ ಮತದಾನದ ಫಲಿತಾಂಶವನ್ನು ಯುಕ್ತವಾಗಿ ಗುರುತು ಮಾಡಿಕೊಂಡಿರದ ಸಂದರ್ಭದಲ್ಲಿ ಹೀಗಾಗುವುದುಂಟು. ಮರು ಪರಿಶೀಲನೆಯ ಅವಶ್ಯಕತೆಯುಂಟಾದರೆ ಫಲಿತಾಂಶ ಗುಂಡಿಯನ್ನು ಒತ್ತುವುದರ ಮೂಲಕ ಹಾಗೆ ಮತ್ತೆ ಪರಿಶೀಲನೆ

ಮಾಡಬಹುದಾಗಿದ್ದು ಇದರಿಂದ ಮತಗಟ್ಟೆಯಲ್ಲಿನ ಮತದಾನದ ಫಲಿತಾಂಶವನ್ನು ಕಂಟ್ರೋಲ್ ಯೂನಿಟ್‌ನ ಡಿಸ್‌ಪ್ಲೇ ಪ್ಯಾನಲ್‌ನಲ್ಲಿ ಮತ್ತೊಮ್ಮೆ ಪ್ರದರ್ಶಿಸಲಾಗುವುದು.

30.2 ಮತಯಂತ್ರಗಳ ಉಪಯೋಗದಿಂದಾಗಿ ಮರು ಎಣಿಕೆ ಅಗತ್ಯತೆಯನ್ನು ಸಂಪೂರ್ಣವಾಗಿ ನಿವಾರಿಸಿದ್ದರೂ, ಚುನಾವಣಾ ಕಾರ್ಯವಿಧಾನ ನಿಯಮಗಳು, 1977ರ ನಿಯಮ 62Aರಲ್ಲಿರುವ ಮರು ಎಣಿಕೆಗೆ ಸಂಬಂಧಿಸಿದ ಉಪಬಂಧಗಳು ಚುನಾವಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಈಗಲೂ ಅನ್ವಯವಾಗುತ್ತವೆ.

30.3 ಈ ರೀತಿ ಮತ ಎಣಿಕೆಯು ಸಂಪೂರ್ಣವಾಗಿ ಮುಗಿದ ನಂತರ ರಿಟರ್ನಿಂಗ್ ಅಧಿಕಾರಿಯು (ಪ್ರಪತ್ರ 17B(EVM) ರಲ್ಲಿರುವ) ಅಂತಿಮ ಫಲಿತಾಂಶ ಪಟ್ಟಿಯಲ್ಲಿ ದಾಖಲಾಗಿರುವ, ಪ್ರತಿಯೊಬ್ಬ ಅಭ್ಯರ್ಥಿಗೂ ಚಲಾಯಿತ ಒಟ್ಟು ಮತಗಳನ್ನು ಓದಿ ಹೇಳುತ್ತಾ ಫಲಿತಾಂಶವನ್ನು ಘೋಷಿಸುವರು. ಘೋಷಣೆ ಮಾಡಿದ ನಂತರ ಅಭ್ಯರ್ಥಿ ಅಥವಾ ಅವನ ಗೈರುಹಾಜರಿಯಲ್ಲಿ ಅವನ ಚುನಾವಣಾ ಏಜೆಂಟನು ಅಥವಾ ಅವನ ಯಾರೇ ಒಬ್ಬ ಎಣಿಕೆ ಏಜೆಂಟನು ಲಿಖಿತ ರೂಪದಲ್ಲಿ ಸಕಾರಣಗಳನ್ನು ನೀಡುತ್ತಾ ಎಲ್ಲಾ ಮತಗಟ್ಟೆಗಳ ಅಥವಾ ಯಾವುದೇ ನಿರ್ದಿಷ್ಟ ಮತಗಟ್ಟೆಯಲ್ಲಿ ದಾಖಲಾಗಿರುವ ಮತಗಳನ್ನು ಮರು ಎಣಿಕೆ ಮಾಡುವಂತೆ ಕೋರಬಹುದಾಗಿರುತ್ತದೆ. ಈ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿಯು ಲಿಖಿತ ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಗಂಟೆ ಮತ್ತು ನಿಮಿಷಗಳನ್ನು ಘೋಷಿಸಿರುತ್ತಾರೆ. ಅಂತಹ **ಮರು ಎಣಿಕೆಗಾಗಿ ಅರ್ಜಿ ಸ್ವೀಕೃತವಾದಾಗ, ಅದರಲ್ಲಿ ನೀಡಿದ ಕಾರಣಗಳನ್ನು ಒಪ್ಪುವ ಬಗ್ಗೆ ನಿರ್ಧಾರವನ್ನು ರಿಟರ್ನಿಂಗ್ ಅಧಿಕಾರಿಯು ತೆಗೆದುಕೊಳ್ಳತಕ್ಕದ್ದು. ಅದರಲ್ಲಿ ನೀಡಿದ ಕಾರಣಗಳು ಸರಿಯೆಂದು ಕಂಡುಬಂದಲ್ಲಿ ಅರ್ಜಿಯನ್ನು ಪೂರ್ತಿಯಾಗಿ ಅಥವಾ ಖಂಡವಾಗಿ/ ಭಾಗಶ: ಪುರಸ್ಕರಿಸಬಹುದು/ ಒಪ್ಪಬಹುದು ಅಥವಾ ಅವರಿಗೆ ಅದರಲ್ಲಿನ ಕಾರಣಗಳು ಸರಿ ಇಲ್ಲ ಎಂದು ಖಾತ್ರಿಯಾದಲ್ಲಿ ಅರ್ಜಿಯನ್ನು ತಿರಸ್ಕರಿಸಬಹುದು.** ರಿಟರ್ನಿಂಗ್ ಅಧಿಕಾರಿಯ ನಿರ್ಧಾರವೇ ಅಂತಿಮವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಪೂರ್ತಿಯಾಗಿ ಅಥವಾ ಭಾಗಶ: ಒಪ್ಪಿದಲ್ಲಿ ರಿಟರ್ನಿಂಗ್ ಅಧಿಕಾರಿಯು ಮತಗಳ ಮರು ಎಣಿಕೆಗಾಗಿ ನಿರ್ದೇಶನ ನೀಡುವರು. ಯಾವುದೇ ಕೋರಿಕೆ ಸ್ವೀಕೃತವಾಗಿದ್ದಲ್ಲಿ ಮತ್ತು ಅಂತಹ ಕೋರಿಕೆಯನ್ನು ರಿಟರ್ನಿಂಗ್ ಅಧಿಕಾರಿಯು ಪುರಸ್ಕರಿಸಿದ್ದಲ್ಲಿ ಅಂಚೆ ಮತ ಪತ್ರಗಳನ್ನೂ ಸಹ ಮರು ಎಣಿಕೆ ಮಾಡಬಹುದಾಗಿರುತ್ತದೆ. ಅಂತಹ ಮರು ಎಣಿಕೆಯು ಮುಗಿದ ನಂತರ ಅಗತ್ಯ ಕಂಡು ಬಂದರೆ ಫಲಿತಾಂಶ ಪಟ್ಟಿಯನ್ನು ತಿದ್ದುಪಡಿ ಮಾಡಿ ಮತ್ತು ಅಂತಹ ತಿದ್ದುಪಡಿಯನ್ನು ಘೋಷಿಸಲಾಗುವುದು. ಪ್ರತಿಯೊಬ್ಬ ಅಭ್ಯರ್ಥಿಗೂ ಚಲಾಯಿತ ಒಟ್ಟು ಮತಗಳನ್ನು ಘೋಷಿಸಿದ ನಂತರ, ಫಲಿತಾಂಶ ಪಟ್ಟಿಯನ್ನು ಪೂರ್ಣಗೊಳಿಸಿ ರಿಟರ್ನಿಂಗ್ ಅಧಿಕಾರಿ ಸಹಿ ಮಾಡುವರು.

**30.4 ರಿಟರ್ನಿಂಗ್ ಅಧಿಕಾರಿಯು ಫಲಿತಾಂಶ ಪಟ್ಟಿಯನ್ನು ಪೂರ್ಣಗೊಳಿಸಿ ಸಹಿ ಹಾಕಿದ ನಂತರ ಯಾರೇ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟರು ಅಥವಾ ಎಣಿಕೆ ಏಜೆಂಟರು ಮರು ಎಣಿಕೆ ನಡೆಸುವಂತೆ ಕೋರುವಂತಿಲ್ಲ. ಫಲಿತಾಂಶ ಪಟ್ಟಿ ಪೂರ್ಣಗೊಂಡು ಸಹಿಯಾದ ನಂತರ ಬಂದ ಕೋರಿಕೆಯನ್ನು ತಿರಸ್ಕರಿಸಲಾಗುವುದು.**

**31. ಮರು ಮತದಾನ ನಡೆಸುವ ಸಂದರ್ಭದಲ್ಲಿ ಎಣಿಕೆ ಕಾರ್ಯದ ಮುಂದೂಡಿಕೆ.**

31.1 ಮುಂದಿನ ಕಂಡಿಕೆಗಳಲ್ಲಿ ತಿಳಿಸುವಂತಹ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ, ರಿಟರ್ನಿಂಗ್ ಅಧಿಕಾರಿಯು ಕಂಡಿಕೆ 24ರಲ್ಲಿ ತಿಳಿಸಿರುವಂತೆ ಯಾವುದೇ ಮತಯಂತ್ರಕ್ಕೆ ಧಕ್ಕೆಯಾಗಿರುವ ಬಗ್ಗೆ ಚುನಾವಣಾ ಆಯೋಗಕ್ಕೆ ವರದಿ ಕಳುಹಿಸಿದ ಪಕ್ಷದಲ್ಲಿ ಅಲ್ಲಿಂದ ಬರುವ ನಿರ್ದೇಶನಗಳಿಗಾಗಿ

ಕಾಯುವರು. ಒಂದುವೇಳೆ ಆಯೋಗವು ಸಂಬಂಧಿಸಿದ ಮತಗಟ್ಟೆ(ಗಳಲ್ಲಿ)/ಯಲ್ಲಿ ಹೊಸದಾಗಿ ಮತದಾನ ನಡೆಸುವಂತೆ ನಿರ್ದೇಶಿಸಿದಲ್ಲಿ ಇನ್ನುಳಿದ ಮತಗಟ್ಟೆಗಳ ಎಣಿಕೆ ಪ್ರಕ್ರಿಯೆಯು ಮುಗಿದ ನಂತರ ಆ ಮತಗಟ್ಟೆಗಳ ಎಣಿಕೆಯನ್ನು ಮುಂದೂಡಲಾಗುವುದು. ಅಂತಹ ಸಂದರ್ಭದಲ್ಲಿ ಎಲ್ಲಾ ಮತಯಂತ್ರಗಳನ್ನು ಹಾಗೂ ಚುನಾವಣಾ ಸಂಬಂಧಿ ಪತ್ರಗಳನ್ನು ರಿಟರ್ನಿಂಗ್ ಅಧಿಕಾರಿಯು ಸೀಲು ಮಾಡುವರು. ಪ್ರತಿಯೊಬ್ಬ ಅಭ್ಯರ್ಥಿ ಅಥವಾ ಅವನ ಏಜೆಂಟನು ಇಚ್ಛಿಸಿದಲ್ಲಿ ಎಲ್ಲಾ ಮತಯಂತ್ರ ಹಾಗೂ ಲಕೋಟೆಗಳ ಮೇಲೆ ಸೀಲು ಹಾಕಲು ಅವಕಾಶ ನೀಡಲಾಗುವುದು. ಇಂತಹ ಮುಂದೂಡಲ್ಪಟ್ಟ ಎಣಿಕೆಯನ್ನು ಹೊಸದಾಗಿ ಮತದಾನವಾದ ನಂತರ ನಡೆಸಲು ರಿಟರ್ನಿಂಗ್ ಅಧಿಕಾರಿಯು ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸುವರು ಮತ್ತು ಮೇಲೆ ತಿಳಿಸಿರುವಂತೆ ಎಣಿಕೆ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವರು.

31.2 ಚುನಾವಣಾ ಕಾರ್ಯ ನಿರ್ವಹಣೆಯ ಮೇಲೆ ನಿಗಾ ಇಡಲು ಚುನಾವಣಾ ಆಯೋಗದಿಂದ ನೇಮಕಗೊಂಡಿರುವ ವೀಕ್ಷಕರು ಅಧಿಕ ಸಂಖ್ಯೆಯ ಮತಗಟ್ಟೆಗಳಲ್ಲಿ ಅಥವಾ ಮತ ಎಣಿಕೆ ಸ್ಥಳದಲ್ಲಿ ಮತಗಟ್ಟೆಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಅಥವಾ ಚುನಾವಣಾ ಮತ ಯಂತ್ರಗಳನ್ನು ಅಥವಾ ಅಂಚೆ ಮತಪತ್ರಗಳನ್ನು ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಿಂದ ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋಗಲಾಗಿದೆಯೆಂದು ಅಥವಾ ಅವುಗಳನ್ನು ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶ ಮಾಡಲಾಗಿದೆ ಅಥವಾ ಅವು ಕಳೆದುಹೋಗಿವೆ ಅಥವಾ ಹಾನಿಗೀಡಾಗಿವೆ ಅಥವಾ ವ್ಯತ್ಯಸ್ತ ಮಾಡಲಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ ಫಲಿತಾಂಶ ಘೋಷಿಸುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಮತಗಳ ಎಣಿಕೆಯನ್ನು ನಡೆಸಲು ಅಥವಾ ಫಲಿತಾಂಶವನ್ನು ಘೋಷಿಸದಿರಲು ರಿಟರ್ನಿಂಗ್ ಆಫೀಸರ್‌ಗೆ ನಿರ್ದೇಶಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಅಂತಹ ಪ್ರಕರಣಗಳಿಂದ ಚುನಾವಣಾ ವ್ಯವಹರಣೆಗಳು ವೀಕ್ಷಕರ ವರದಿಯ ಆಧಾರದ ಮತ್ತು ಎಲ್ಲಾ ವಾಸ್ತವಿಕ ಪರಿಸ್ಥಿತಿಗಳನ್ನು ಪರಿಗಣಿಸಿದ ನಂತರ ಚುನಾವಣಾ ಆಯೋಗ ನೀಡಬಹುದಾದಂತಹ ನಿರ್ದೇಶನಗಳ ಅನುಸಾರವಾಗಿ ಮುಂದುವರಿಯುವುದು.

## 32. ಮತ ಎಣಿಕೆ ನಂತರ ವಿದ್ಯುನ್ಮಾನ ಮತಯಂತ್ರಗಳಿಗೆ ಮರು ಮೊಹರು ಹಾಕುವುದು.

32.1 ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿರುವ ಮತಗಳ ಫಲಿತಾಂಶವನ್ನು ಅಭ್ಯರ್ಥಿವಾರು ಖಚಿತಪಡಿಸಿಕೊಂಡು ಭಾಗ–II ಮತ ಎಣಿಕೆ ಫಲಿತಾಂಶ ಪ್ರಪತ್ರ 17A(EVM) ಹಾಗೂ ಪ್ರಪತ್ರ 17B(EVM)ರಲ್ಲಿನ ಅಂತಿಮ ಫಲಿತಾಂಶ ಹಾಳೆಯಲ್ಲಿ ನಮೂದಿಸಿದ ನಂತರ ಕಂಟ್ರೋಲ್ ಯೂನಿಟ್‌ಅನ್ನು ರಿಟರ್ನಿಂಗ್ ಆಫೀಸರ್ ಅವರ ಮೊಹರು ಹಾಗೂ ಆಯೋಗದ ರಹಸ್ಯ ಮೊಹರಿನ ಸಹಿತ ಮರು ಮೊಹರು ಮಾಡಿ ಇರಿಸುವರು.

32.2 ಕಂಟ್ರೋಲ್ ಯೂನಿಟ್‌ನಲ್ಲಿ ದಾಖಲಾಗಿರುವ ಮತದಾನದ ಫಲಿತಾಂಶ ಅಳಿಸಿಹೋಗದಂತೆ ಮತ್ತು ಅಂತಹ ಫಲಿತಾಂಶದ ಮೆಮೊರಿಯನ್ನು ಕಂಟ್ರೋಲ್ ಯೂನಿಟ್ ಉಳಿಸಿಕೊಳ್ಳುವಂತಹ ರೀತಿಯಲ್ಲಿ ಮರು ಮೊಹರನ್ನು ಮಾಡಲಾಗುವುದು.

32.3 ಕಂಟ್ರೋಲ್ ಯೂನಿಟ್‌ಅನ್ನು ಮೇಲೆ ಹೇಳಿರುವಂತೆ ಮರು ಮೊಹರು ಮಾಡುವುದನ್ನು ಈ ಮುಂದಿನ ವಿಧಾನದಲ್ಲಿ ಮಾಡಲಾಗುವುದು.

(i) ಕಂಟ್ರೋಲ್ ಯೂನಿಟ್‌ನ ಕ್ಯಾಂಡಿಡೇಟ್ ಸೆಟ್ ಸೆಕ್ಷನ್ ನಿಂದ ಬ್ಯಾಟರಿಯನ್ನು ತೆಗೆದು ಬ್ಯಾಟರಿಯನ್ನು ತೆಗೆದ ನಂತರ ಕ್ಯಾಂಡಿಡೇಟ್ ಸೆಟ್ ಸೆಕ್ಷನ್ ಹೊದಿಕೆ (ಕವರ್) ಯನ್ನು ಮರು ಮೊಹರು ಮಾಡಲಾಗುವುದು.

ಸೂಚನೆ: ವಿದ್ಯುನ್ಮಾನ ಮತಯಂತ್ರವು ಹಾಳಾಗದೇ ಇರಲು ಬ್ಯಾಟರಿಯನ್ನು ತೆಗೆಯುವುದು ಅವಶ್ಯಕ ಇದರಿಂದ ಯೂನಿಟ್ಟಿನಲ್ಲಿ ದಾಖಲಾಗಿರುವ ಮತಗಳ ಫಲಿತಾಂಶವು ಅಳಿಸುವುದಿಲ್ಲ. ಇದರಿಂದಾಗಿ ಬ್ಯಾಟರಿ ಇಲ್ಲದಿದ್ದರೂ ಸ್ಮೃತಿಯಲ್ಲಿ ಎಲ್ಲಾ ದಾಖಲೆಗಳು ಉಳಿಸಲ್ಪಟ್ಟಿರುತ್ತದೆ.

(ii) ಫಲಿತಾಂಶ ವಿಭಾಗದ ಹೊರ ಹೊದಿಕೆ (ಕವರ್) ಯನ್ನು ಮುಚ್ಚಿ ಮತ್ತು ಮರು ಮೊಹರು ಮಾಡಲಾಗುವುದು.

(iii) ಹಾಗೆ ಮರು ಮೊಹರು ಮಾಡಲಾದ ಕಂಟ್ರೋಲ್ ಯೂನಿಟ್‌ಅನ್ನು ಸಾಗಿಸುವ ಪೆಟ್ಟಿಗೆಯಲ್ಲಿ (Carrying Case) ಇಡಲಾಗುತ್ತದೆ.

(iv) ಸಾಗಿಸುವ ಪೆಟ್ಟಿಗೆಗೆ ಮರು ಮೊಹರು ಮಾಡಲಾಗುತ್ತದೆ.

(v) ಚುನಾವಣಾ ವಿವರಗಳು, ಚುನಾವಣಾ ಕ್ಷೇತ್ರದ ಹೆಸರು, ಕಂಟ್ರೋಲ್ ಯೂನಿಟ್‌ಅನ್ನು ಉಪಯೊಗಿಸಿದ ಮತಗಟ್ಟೆಯ ವಿವರಗಳು, ಕಂಟ್ರೋಲ್ ಯೂನಿಟ್‌ನ ಕ್ರಮಸಂಖ್ಯೆ, ಮತದಾನದ ದಿನಾಂಕ ಮತ್ತು ಮತ ಎಣಿಕೆ ದಿನಾಂಕವನ್ನೊಳಗೊಂಡ ವಿಳಾಸ ಪಟ್ಟಿ (ಅಡ್ರಸ್ ಟ್ಯಾಗ್)ಯನ್ನು ಸಾಗಿಸುವ ಪೆಟ್ಟಿಗೆಯ ಹಿಡಿಕೆಗೆ ಬಿಗಿಯಾಗಿ ಲಗತ್ತಿಸಲಾಗುತ್ತದೆ.

32.4 ಒಂದು ವೇಳೆ ಅಭ್ಯರ್ಥಿ/ ಅವರ ಚುನಾವಣಾ ಏಜೆಂಟರು ಅಥವಾ ಎಣಿಕೆ ಏಜೆಂಟರು ಇಚ್ಛಿಸಿದಲ್ಲಿ ಮತಯಂತ್ರದ ಮೇಲೆ ತಮ್ಮ ಸೀಲನ್ನು ಹಾಕಲು ಅನುಮತಿಸಲಾಗುತ್ತದೆ. ಈ ಯಂತ್ರಗಳ ಮೆಲೆ ತಾವು ಪ್ರತಿನಿಧಿಸುತ್ತಿರುವ ಅಭ್ಯರ್ಥಿಯ ಹಿತದೃಷ್ಟಿಯಿಂದ ಎಣಿಕೆ ಏಜೆಂಟರು ತಮ್ಮ ಸೀಲನ್ನು ಹಾಕಲು ಸಲಹೆ ನೀಡಲಾಗಿದೆ. ಇದರಿಂದಾಗಿ ದಾಖಲಾಗಿರುವ ಮತಗಳಲ್ಲಿ ಯಾವುದೇ ಬದಲಾವಣೆ ಇಲ್ಲ ಎಂಬುದಾಗಿ ಅವರ ಅಭ್ಯರ್ಥಿಗೆ ಖಾತ್ರಿಯಾಗುತ್ತದೆ. ಒಂದು ವೇಳೆ ಸ್ವತ: ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಸೀಲು ಹಾಕಿದಲ್ಲಿ ಎಣಿಕೆ ಏಜೆಂಟನು ಪ್ರತ್ಯೇಕವಾಗಿ ಸೀಲು ಹಾಕುವ ಅವಶ್ಯಕತೆ ಇರುವುದಿಲ್ಲ.

## ಅನುಬಂಧ– I
## ಪ್ರಪತ್ರ 11
### ಮತ ಎಣಿಕೆ ಏಜೆಂಟರ ನೇಮಕಾತಿ

-----------------ನಗರಸಭೆ / ಪುರಸಭೆ / ಪಟ್ಟಣ ಪಂಚಾಯತಿಗೆ ------------ ವಾರ್ಡಿನಿಂದ ಚುನಾವಣೆ.

ಇವರಿಗೆ:

ರಿಟರ್ನಿಂಗ್ ಆಫೀಸರ್,

ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ . . . . . . . . . . . . . . . . ರವರ ಅಭ್ಯರ್ಥಿ/ ಚುನಾವಣಾ ಏಜೆಂಟನಾದ . . . . . . . . . . . . . ಎಂಬ ಹೆಸರಿನ ನಾನು * . . . . . . . . . . ರಲ್ಲಿ ನಡೆಸಲಾಗುವ ಮತಗಳ ಎಣಿಕೆ ಕಾರ್ಯದಲ್ಲಿ ಭಾಗಿಯಾಗಲು ನನ್ನ ಎಣಿಕೆ ಏಜೆಂಟರಾಗಿ ಈ ಮುಂದಿನ ವ್ಯಕ್ತಿಗಳನ್ನು ಈ ಮೂಲಕ ನೇಮಕ ಮಾಡಿರುತ್ತೇನೆ.

| ಮತ ಎಣಿಕೆ ಏಜೆಂಟನ ಹೆಸರು | ಮತ ಎಣಿಕೆ ಏಜೆಂಟನ ವಿಳಾಸ |
|---|---|
| 1. | |
| 2. | |
| 3. | |
| ಇತ್ಯಾದಿ | |

ಅಭ್ಯರ್ಥಿ/ ಚುನಾವಣಾ ಏಜೆಂಟನ * ಸಹಿ

ನಾವು ಮತ ಎಣಿಕೆ ಏಜೆಂಟರಾಗಿ ಕಾರ್ಯ ನಿರ್ವಹಿಸಲು ಒಪ್ಪಿದ್ದೇವೆ.

1.

2.

3.

ಇತ್ಯಾದಿ

---

ಸ್ಥಳ:

ದಿನಾಂಕ: ಮತ ಎಣಿಕೆ ಏಜೆಂಟರ ಸಹಿ

# ಮತ ಎಣಿಕೆ ಏಜೆಂಟರ ಘೋಷಣೆ

## (ರಿಟರ್ನಿಂಗ್ ಆಫೀಸರ್‌ರವರ ಸಮಕ್ಷಮದಲ್ಲಿ ಸಹಿ ಮಾಡಬೇಕು)

ಮೇಲ್ಕಂಡ ಚುನಾವಣೆಯಲ್ಲಿ *ನಾವು ಓದಿರುವ ನಮಗೆ ಓದಲಾದ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ರ ಪ್ರಕರಣ 30**ರ ಮೂಲಕ ನಿಷೇಧಿಸಲಾಗಿರುವ ಯಾವುದೇ ಕೃತ್ಯವನ್ನು ನಾವು ಮಾಡುವುದಿಲ್ಲವೆಂಬುದಾಗಿ ಈ ಮೂಲಕ ಘೋಷಿಸುತ್ತೇವೆ.

1.

2.

3.

ಸ್ಥಳ: . . . . . .                ಮತ ಎಣಿಕೆ ಏಜೆಂಟರ ಸಹಿ

ನನ್ನ ಮುಂದೆ ಸಹಿ ಮಾಡಿರುತ್ತಾರೆ.

ದಿನಾಂಕ:                ರಿಟರ್ನಿಂಗ್ ಆಫೀಸರ್

---

* ಸಮುಚಿತವಲ್ಲದ ಪರ್ಯಾಯವನ್ನು ಹೊಡೆದು ಹಾಕಿ.

** ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ರ ಪ್ರಕರಣ 30:

" 30. ಮತದಾನದ ಗೌಪ್ಯತೆಯನ್ನು ಕಾಪಾಡುವುದು . . . . . . . . (1) ಚುನಾವಣೆಯ ಮತಗಳ ಎಣಿಕೆಯನ್ನು ದಾಖಲಿಸುವುದಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಅಧಿಕಾರಿ ಗುಮಾಸ್ತ ಏಜೆಂಟ್ ಅಥವಾ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಇತರ ವ್ಯಕ್ತಿಯು ಮತದಾನದ ಗೌಪ್ಯತೆಯನ್ನು ಕಾಪಾಡತಕ್ಕದ್ದು ಮತ್ತು ಕಾಪಾಡುವಲ್ಲಿ ನೆರವಾಗತಕ್ಕದ್ದು ಮತ್ತು ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಲಾದ ಕೆಲವು ಉದ್ದೇಶದ ಹೊರತು ಅಂತಹ ಗೌಪ್ಯತೆಯನ್ನು ಉಲ್ಲಂಘಿಸಲು ಉದ್ದೇಶ ಹೊಂದಿರುವ ಯಾವನೇ ವ್ಯಕ್ತಿಗೆ ಯಾವದೇ ಮಾಹಿತಿಯನ್ನು ನೀಡತಕ್ಕುದ್ದಲ್ಲ.

(2) ಉಪ ಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಗೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಅಥವಾ ಜುಲ್ಮಾನೆ ಸಹಿತ ಅಥವಾ ಇವೆರಡೂ ಶಿಕ್ಷೆಗಳಿಗೆ ಗುರಿಪಡಿಸತಕ್ಕದು."

# ಅನುಬಂಧ– II

## ಪ್ರಪತ್ರ 13

## ಮತ ಎಣಿಕೆ ಏಜೆಂಟನ ನೇಮಕಾತಿಯ ರದ್ದತಿ

. . . . . . . . . . . . . * ಚುನಾವಣೆ

ಇವರಿಗೆ:

ರಿಟರ್ನಿಂಗ್ ಆಫೀಸರ್,

ಮೇಲ್ಕಂಡ ಚುನಾವಣೆಯಲ್ಲಿ ಅಭ್ಯರ್ಥಿಯಾಗಿರುವ . . . . . . . . . . . . . (. . . . . . . . . ರ ಚುನಾವಣಾ ಏಜೆಂಟ್) ಎಂಬ ನಾನು ನನ್ನ/ ಆತನ ಮತ ಎಣಿಕೆ ಏಜೆಂಟರಾದ . . . . . . . . . . ರ ನೇಮಕಾತಿಯನ್ನು ಈ ಮೂಲಕ ರದ್ದುಗೊಳಿಸುತ್ತಿದ್ದೇನೆ.

ಸ್ಥಳ:

ದಿನಾಂಕ: ರದ್ದುಗೊಳಿಸುವ ವ್ಯಕ್ತಿಯ ಸಹಿ

---

# ಅನುಬಂಧ– III

## ಪ್ರಪತ್ರ 17A(EVM)

## ಭಾಗ–1 – ದಾಖಲಾದ ಮತಗಳ ಲೆಕ್ಕ

__________________ನಗರಸಭೆ/ಪುರಸಭೆ /ಪಟ್ಟಣ ಪಂಚಾಯತಿಗೆ ___________ವಾರ್ಡಿನಿಂದ ಚುನಾವಣೆ

ಮತಗಟ್ಟೆ ಸಂಖ್ಯೆ ಮತ್ತು ಹೆಸರು _________________________________________

ಮತಗಟ್ಟೆಯಲ್ಲಿ ಬಳಸಲಾದ ಮತಯಂತ್ರದ ಗುರುತಿನ ಸಂಖ್ಯೆ __________________________________

ಕಂಟ್ರೋಲ್ ಯೂನಿಟ್ ಸಂಖ್ಯೆ : ______________________

ಬ್ಯಾಲೆಟಿಂಗ್ ಯೂನಿಟ್ ಸಂಖ್ಯೆ : ______________________

**ಮತಗಟ್ಟೆಯಲ್ಲಿ ಬಳಸಲಾದ ಬ್ಯಾಲೆಟ್ ಯೂನಿಟ್:**

1. ಮತಗಟ್ಟೆಗೆ ಹಂಚಿಕೆ ಮಾಡಲಾದ ಮತದಾರರ ಒಟ್ಟು ಸಂಖ್ಯೆ : __________________________
2. ಮತದಾರರ ರಿಜಿಸ್ಟರಿನಲ್ಲಿ (ಪ್ರಪತ್ರ 20A) ನಮೂದಿಸಲಾದಂತೆ ಮತದಾರರ ಒಟ್ಟು ಸಂಖ್ಯೆ : ____
3. ಮತಗಳನ್ನು ದಾಖಲಿಸದಿರಲು ತೀರ್ಮಾನಿಸಿದ ಮತದಾರರ ಸಂಖ್ಯೆ : _____________________
4. ಮತ ಚಲಾಯಿಸಲು ಅನುಮತಿಸದಿರುವ ಮತದಾರರ ಸಂಖ್ಯೆ : __________________________
5. ಮತಯಂತ್ರದ ಪ್ರಕಾರ ದಾಖಲಾದ ಮತಗಳ ಒಟ್ಟು ಸಂಖ್ಯೆ : ___________________________
6. 5ನೇ ಅಂಶದ ಎದುರು ಕಾಣಿಸಿರುವ ಒಟ್ಟು ಮತಗಳ ಸಂಖ್ಯೆಯು 2ನೇ ಅಂಶದ ಎದುರು ಕಾಣಿಸಿರುವ ಮತದಾರರ ಒಟ್ಟು ಸಂಖ್ಯೆಯಲ್ಲಿ 3ನೇ ಅಂಶದ ಎದುರು ಕಾಣಿಸಿರುವಂಥ, ಮತಗಳನ್ನು ದಾಖಲಿಸದಿರಲು ತೀರ್ಮಾನಿಸಿದ ಮತದಾರರ ಸಂಖ್ಯೆಯನ್ನು ಕಳೆದನಂತರ ಬಂದ ಸಂಖ್ಯೆಯಲ್ಲಿ 4ನೇ ಅಂಶದ ಎದುರು ಕಾಣಿಸಿರುವ ಮತದಾರರ ಸಂಖ್ಯೆಯನ್ನು ಕಳೆದರೆ (2–3–4) ಬರುವ ಸಂಖ್ಯೆಗೆ ಹೋಲಿಕೆಯಾಗುತ್ತದೆಯೇ ಅಥವಾ ಏನಾದರೂ ವ್ಯತ್ಯಾಸಗಳು ಗಮನಕ್ಕೆ ಬಂದಿದೆಯೇ: _______________
7. ಟೆಂಡರ್ಡ್ ಮತಪತ್ರಗಳನ್ನು ನೀಡಲಾದ ಮತದಾರರ ಸಂಖ್ಯೆ :___________________________
8. ಟೆಂಡರ್ಡ್ ಮತಪತ್ರಗಳ ಸಂಖ್ಯೆ: ___________

| | ಕ್ರ. ಸಂ. ಯಿಂದ | ಕ್ರ. ಸಂ. ವರೆಗೆ | ಒಟ್ಟು |
|---|---|---|---|
| (ಎ) ಬಳಕೆಗೆ ಸ್ವೀಕರಿಸಲಾದವುಗಳು | | | |
| (ಬಿ) ಮತದಾರರಿಗೆ ನೀಡಲಾದವುಗಳು | | | |
| (ಸಿ) ಬಳಸದೆ ಹಾಗೇ ಹಿಂದಿರುಗಿಸಿದವು | | | |

**9. ಪೇಪರ್ ಸೀಲ್‌ಗಳ ಲೆಕ್ಕ**

ಪೋಲಿಂಗ್ ಏಜೆಂಟರ ಸಹಿ

1) ಒದಗಿಸಲಾಗಿರುವ ಪೇಪರ್ ಸೀಲ್‌ಗಳು
ಕ್ರ.ಸಂ. ______________ ಯಿಂದ
ಕ್ರ.ಸಂ ______________ ವರೆಗೆ

1. ________________________

2) ಒದಗಿಸಲಾದ ಪೇಪರ್ ಸೀಲ್‌ಗಳ
ಒಟ್ಟು ಸಂಖ್ಯೆ ________________

2. ________________________

3) ಬಳಸಲಾದ ಪೇಪರ್ ಸೀಲ್‌ಗಳ ಸಂಖ್ಯೆ ______

3. ________________________

4) ರಿಟರ್ನಿಂಗ್ ಆಫೀಸರ್‌ರವರಿಗೆ ಹಿಂದಿರುಗಿಸಲಾದ
ಬಳಸಿರದ ಪೇಪರ್ ಸೀಲ್‌ಗಳ ಸಂಖ್ಯೆ (2ನೇ
ಅಂಶದಿಂದ 3ನೇ ಅಂಶವನ್ನು ಕಳೆಯಿರಿ) ______

4. ________________________

5) ಹಾನಿಗೊಂಡ ಪೇಪರ್ ಸೀಲ್‌ಗಳ ಕ್ರಮ ಸಂಖ್ಯೆ
(ಯಾವುದಾದರೂ ಇದ್ದರೆ.) ______

5. ________________________

ಅಭ್ಯರ್ಥಿಗಳ ಪರ ಏಜೆಂಟರ ಸಹಿ

1.
2.
3.
4.

ದಿನಾಂಕ:

ಸ್ಥಳ :

ಪ್ರಿಸೈಡಿಂಗ್ ಅಧಿಕಾರಿ ಸಹಿ

ಮತಗಟ್ಟೆ ಸಂಖ್ಯೆ __________

## ಭಾಗ– II - ಮತ ಎಣಿಕೆಯ ಫಲಿತಾಂಶ

| ಕ್ರ. ಸಂ. | ಅಭ್ಯರ್ಥಿಯ ಹೆಸರು | ದಾಖಲಿಸಲಾದ ಮತಗಳ ಸಂಖ್ಯೆ |
|---|---|---|
| 1. | | |
| 2. | | |
| 3. | | |
| 4. | | |
| 5. | | |
| 6. NOTA | | |
| ಒಟ್ಟು | | |

ಮೇಲೆ ಕಾಣಿಸಿದ ಮತಗಳ ಒಟ್ಟು ಸಂಖ್ಯೆಯು ಭಾಗ 1 ರ 5ನೇ ಅಂಶದ ಎದುರು ಕಾಣಿಸಿದ ಮತಗಳ ಒಟ್ಟು ಸಂಖ್ಯೆಯೊಂದಿಗೆ ಹೋಲಿಕೆಯಾಗುತ್ತದೆಯೇ ಅಥವಾ ಎರಡೂ ಸಂಖ್ಯೆಗಳ ನಡುವೆ ಯಾವುದೇ ವ್ಯತ್ಯಾಸ ಕಂಡು ಬಂದಿದೆಯೇ? ಹೌದು, ಇದು ತಾಳೆಯಾಗುತ್ತಿದೆ.

ಸ್ಥಳ : _____________ ಮತ ಎಣಿಕೆ ಮೇಲ್ವಿಚಾರಕರ ಸಹಿ

ದಿನಾಂಕ:

---

ಅಭ್ಯರ್ಥಿ/ ಚುನಾವಣಾ ಏಜೆಂಟ್/ ಮತ ಎಣಿಕೆ ಏಜೆಂಟರ ಹೆಸರು:

1.

2.

3.

4.

5.

6.

7.

8.

ಸ್ಥಳ : _____________ ರಿಟರ್ನಿಂಗ್ ಆಫೀಸರ್‌ರವರ ಸಹಿ

ದಿನಾಂಕ: ___________

## ಅನುಬಂಧ–IV

### ಪ್ರಪತ್ರ 17B (EVM)

(64 Z ನಿಯಮವನ್ನು ನೋಡಿ)

**ಅಂತಿಮ ಫಲಿತಾಂಶದ ಹಾಳೆ**

**( ಎಣಿಕೆ ಕೇಂದ್ರದಲ್ಲಿ ಮತದಾನ ಫಲಿತಾಂಶವನ್ನು ದಾಖಲ್ಮಾಡುವುದಕ್ಕಾಗಿ ಉಪಯೋಗಿಸಬೇಕಾದುದು)**

________________ ವಾರ್ಡಿನಿಂದ __________________________ ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿಯ ಕೌನ್ಸಿಲರುಗಳ ಚುನಾವಣೆ.

ವಾರ್ಡಿನ ಹೆಸರು:

ವಾರ್ಡಿನ ಒಟ್ಟು ಮತದಾರರ ಸಂಖ್ಯೆ:

| ಮತಗಟ್ಟೆ ಸಂಖ್ಯೆ | ಅಭ್ಯರ್ಥಿಗಳ ಪರವಾಗಿ ಚಲಾಯಿಸಲಾದ ಸಿಂಧು ಮತಗಳ ಸಂಖ್ಯೆ | | | ನೋಟಾಗೆ ದಾಖಲಾದ ಒಟ್ಟು ಮತಗಳ ಸಂಖ್ಯೆ | ಸಿಂಧು ಮತಗಳ ಒಟ್ಟು ಸಂಖ್ಯೆ | ತಿರಸ್ಕೃತ ಮತಗಳ ಸಂಖ್ಯೆ | ಚಲಾಯಿಸಲಾದ (ಟೆಂಡರ್ಡ್) ಮತಗಳ ಒಟ್ಟು ಸಂಖ್ಯೆ |
|---|---|---|---|---|---|---|---|
| | A | B | C | | | | |
| (1) | | | | | | | |
| (2) | | | | | | | |
| (3) | | | | | | | |
| (4) | | | | | | | |
| ಇತ್ಯಾದಿ | | | | | | | |
| | | | | | | | |
| ಮತದಾನ ಕೇಂದ್ರಗಳಲ್ಲಿ ದಾಖಲಾದ ಒಟ್ಟು ಮತಗಳ ಸಂಖ್ಯೆ | | | | | | | |
| ಅಂಚೆ ಮತಪತ್ರಗಳ ಮೂಲಕ ದಾಖಲಾದ ಒಟ್ಟು ಮತಗಳ ಸಂಖ್ಯೆ | | | | | | | |
| ದಾಖಲಾದ ಒಟ್ಟು ಮತಗಳು | | | | | | | |

ಸ್ಥಳ :

ದಿನಾಂಕ:

ರಿಟರ್ನಿಂಗ್ ಅಧಿಕಾರಿಗಳ ಸಹಿ

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ. 258 / ಪಿ5